ನಗೆ ಬಗೆಯ ಕಿರುಗತೆಗಳು

ಡಾ. ವಾಮನ ನಂದಾವರ

ಕರ್ನಾಟಕ ಸರಕಾರ
ಕರ್ನಾಟಕ
ತುಳು ಸಾಹಿತ್ಯ
ಅಕಾಡೆಮಿ

ನಗೆ ಬಗೆಯ ಕಿರುಗತೆಗಳು

ಡಾ. ವಾಮನ ನಂದಾವರ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಉರ್ವಸ್ಟೋರ್, ಮಂಗಳೂರು



NAGE BAGEYA KIRUGATHEGALU

A collection Kannada folk short stories by

Dr. Vamana Nandavara
Drishya, Gollachil, Derebail, Mangalore - 575 006
Mobile : 9448252698

Publisher
Chandrahasa Rai B.
Registrar, Karnataka Tulu Sahitya Academy

Published by
Karnataka Tulu Sahitya Academy
Mangaluru - 575 006
Dakshina Kannada, Karnataka, INDIA
Tel : +91 824 2459389
Email : tulu.academy@yahoo.co.in

© Karnataka Tulu Sahithya Academy

First Impression : 2018
No. of copies : 500
Paper used : 80 gsm NS Maplitho Size : Cr. 1/4
Pages : xii+42
Price : Rs. 75

Sketches & Cover Photo : **Tharanath Kairangal**
Cover Design : **Kallur Nagesh**

Designed & printed at
Aakrithi Prints
Light House Hill Road, Mangaluru - 1
Phone : +91 824 2443002

ನಗೆ ಬಗೆಯ ಕಿರುಗತೆಗಳು

ಹಳ್ಳಿಯ ಬದುಕಿನ ದೈನಂದಿನ ಜೀವನದಲ್ಲಿ ನಡೆಯುವ ಘಟನೆಗಳು ಬಹಳ ಸಾರಸ್ಯಕರವಾಗಿರುತ್ತವೆ. ಮನೆಯ ಒಳಗೆ, ಕುಟುಂಬದಲ್ಲಿ, ಮನೆಯ ಹೊರಗೆ ಕೆಲಸದ ವೇಳೆಯಲ್ಲಿ, ಸಾಮಾಜಿಕ ಧಾರ್ಮಿಕ ಸನ್ನಿವೇಶಗಳಲ್ಲಿ ಹೀಗೆ ಬಗೆಬಗೆಯ ಸಂದರ್ಭಗಳಲ್ಲಿ ಹಳ್ಳಿಯ ಜನರು ದೇಸೀ ಬೌದ್ಧಿಕ ಗುಣವನ್ನು ತಮ್ಮ ಮಾತುಗಳ ಮೂಲಕ ಮತ್ತು ಕಾರ್ಯಗಳ ಮೂಲಕ ಅದ್ಭುತವಾಗಿ ಪ್ರಕಟಿಸುತ್ತಾರೆ. ಅಪಾರ ಜೀವನಾನುಭವದಿಂದ ಪ್ರಾಪ್ತವಾದ ಹಳ್ಳಿಗರ ನಡೆನುಡಿಗಳು ತಮ್ಮ ಸಮಯಪ್ರಜ್ಞೆ ಮತ್ತು ಸಾಂದರ್ಭಿಕ ವಿವೇಕದಿಂದ ನಮಗೆ ಬೆರಗನ್ನು ಉಂಟುಮಾಡುತ್ತವೆ. ಹಾಸ್ಯದ ಹೊನಲನ್ನು ಹರಿಸುತ್ತವೆ. ಜನಪದ ಗಾದೆಗಳು, ನುಡಿಗಟ್ಟುಗಳು, ನಂಬಿಕೆಗಳು, ಆಚರಣೆಗಳು, ಗುರುತುಗಳು ಹೀಗೆ ಬಹುಬಗೆಗಳ ನಿರ್ಮಾಣದ ಹಿಂದೆ ಕಿರುಗತೆಗಳ ಸಿಡಿಪಟಾಕಿಯೊಂದು ಅವಿತುಕೊಂಡಿರುತ್ತದೆ.

ಕವಿ ಜಾನಪದ ವಿದ್ವಾಂಸ ಮತ್ತು ಕತೆಗಾರರಾದ ಡಾ. ವಾಮನ ನಂದಾವರ ಬಾಲ್ಯದಿಂದ ತೊಡಗಿ ತಮ್ಮ ಬದುಕಿನ ಬೇರೆ ಬೇರೆ ಸಂದರ್ಭಗಳಲ್ಲಿ ಕೇಳಿದ ಸಂಗತಿಗಳ ಹಿಂದಿನ ಜಾಡನ್ನು ಹಿಡಿದು ಅಲ್ಲಿನ ವಿವರಣೆಗಳಿಗೆ ಕಥನದ ರೂಪವೊಂದನ್ನು ತೊಡಿಸಿ ಅವನ್ನು ಇಲ್ಲಿ ಮಾಲೆ ಪಟಾಕಿಯಂತೆ ಜೋಡಿಸಿ ಕೊಟ್ಟಿದ್ದಾರೆ. ತುಳು ಬದುಕಿನಿಂದ ದೊರೆತ 42 ಈ ಕಿರುನಗೆ ಕತೆಗಳು ಅವರ ಬರವಣಿಗೆಯಲ್ಲಿ ತುಳು ಮೂಲದಲ್ಲಿ ಮತ್ತು ಕನ್ನಡ, ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಅನುವಾದಗಳಲ್ಲಿ ಇಲ್ಲಿ ಸಂಕಲನಗೊಂಡಿವೆ. ಈ 42 ನಗೆ ಬಗೆಯ ಕಿರುಗತೆಗಳನ್ನು ಮಕ್ಕಳು ಮತ್ತು ದೊಡ್ಡವರು ಎಲ್ಲರೂ ಓದಿ ಸ್ವಚ್ಛಂದವಾಗಿ ನಕ್ಕು, ವಿರಾಮವಾಗಿ ಆ ಕತೆಗಳ ಒಳಗಿನ ಜಾಣ್ಮೆ ಹಾಗೂ ನೀತಿಯನ್ನು ಮನನ ಮಾಡಿಕೊಳ್ಳುವುದು ಇಂದಿನ ಆಧುನಿಕ ಸಾಮಾಜಿಕ ಸಂದರ್ಭಕ್ಕೆ ಹೆಚ್ಚು ಅಗತ್ಯವಾದುದು. ಕಿರಿದರಲ್ಲಿ ಹಿರಿದರ್ಥವನ್ನು ಹೇಳುವ ಈ ಕಿರುಗತೆಗಳು ತುಳು, ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ಹಿರಿಯರ ಮತ್ತು ಕಿರಿಯರ ಮನಸ್ಸುಗಳಿಗೆ ಆಹ್ಲಾದವನ್ನು ಕೊಡಲಿ ಎಂದು ಹಾರೈಸುತ್ತೇನೆ. ಹಿರಿಯ ಕಿರಿಯ ವಯಸ್ಸಿನ ಎಲ್ಲರಿಗೂ ಸಲ್ಲುವ ಈ ನಗೆಬಗೆಯ ಕಿರುಗತೆಗಳನ್ನು ನಾಲ್ಕು ಭಾಷೆಗಳಿಗೆ ನಾಲ್ಕು ದಿಕ್ಕುಗಳಿಗೆ ಪಸರಿಸಿದ ಡಾ. ವಾಮನ ನಂದಾವರ ಅವರಿಗೆ ಪ್ರೀತಿಯ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಂಗಳೂರು **ಪ್ರೊ. ಬಿ.ಎ. ವಿವೇಕ ರೈ**

5 ಜನವರಿ 2018

ಅಧ್ಯಕ್ಷರ ಮಾತು

ತುಳು ವಿದ್ವಾಂಸರಾದ ಡಾ. ವಾಮನ ನಂದಾವರ ಇವರ ಸಣ್ಣ ಕತೆಗಳ ಸಂಕಲನ 'ತೆಲಿಕೆ ನಲಿಕೆದ ಕಿನ್ಯ ಕತೆಕುಲು' ಇದರ ಕನ್ನಡ ಅನುವಾದ 'ನಗೆ ಬಗೆಯ ಕಿರುಗತೆಗಳು' ಪುಸ್ತಕವನ್ನು ಅಕಾಡೆಮಿ ವತಿಯಿಂದ ಪ್ರಕಟಿಸಲು ಅತೀವ ಸಂತಸವೆನಿಸುತ್ತದೆ. ಡಾ. ವಾಮನ ನಂದಾವರ ಅವರು ತನ್ನ ಮೂಲ ತುಳು ಕೃತಿಯನ್ನು ಅಚ್ಚುಕಟ್ಟಾಗಿ ಮತ್ತು ಸುಂದರವಾಗಿ ಕನ್ನಡ ಭಾಷೆಗೆ ಅನುವಾದಿಸಿ ಕನ್ನಡದ ಓದುಗರಿಗೂ ತುಳುವಿನ ಕತೆಗಳನ್ನು ಪರಿಚಯಿಸಿ ತುಳು ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡುತ್ತಿದ್ದಾರೆ.

ತುಳು ಸಾಹಿತ್ಯ-ಸಂಸ್ಕೃತಿ-ಜನಪದ ಸಂಗತಿಗಳನ್ನು ತುಳುವೇತರ ಬಂಧುಗಳಿಗೂ ಪರಿಚಯಿಸುವ ಸಲುವಾಗಿ ತುಳುವಿನಿಂದ ಇತರ ಭಾಷೆಗಳಿಗೆ ಹಾಗೆಯೇ ತುಳುವೇತರ ಸಂಗತಿಗಳನ್ನು ತುಳು ಭಾಷಾ ಓದುಗರಿಗೆ ಒದಗಿಸಲು ಇತರ ಭಾಷೆಗಳಿಂದ ತುಳು ಭಾಷೆಗೆ ಅನುವಾದಕ್ಕೆ ಅವಕಾಶ ಕಲ್ಪಿಸುವುದು ಅಕಾಡೆಮಿಯ ಆದ್ಯತಾ ವಿಷಯಗಳಲ್ಲಿ ಒಂದಾಗಿದೆ. ಶ್ರೀನಿವಾಸ ಉಪಾಧ್ಯಾಯ ಪಣಿಯಾಡಿ (ಎಸ್.ಯು. ಪಣಿಯಾಡಿ), ನಾರಾಯಣ ಶೆಟ್ಟಿ ಕಿಲ್ಲೆ (ಎನ್.ಎಸ್. ಕಿಲ್ಲೆ), ಪೊಳಲಿ ಶೀನಪ್ಪ ಹೆಗ್ಡೆ ಮೊದಲಾದವರಿಂದ ಆರಂಭವಾದ ತುಳು ಸಾಹಿತ್ಯ ಚಳವಳಿಯು ತುಳು ಭಾಷೆಗೆ ಭದ್ರವಾದ ಬುನಾದಿಯನ್ನು ಒದಗಿಸಿದೆ.

1994ರಲ್ಲಿ ಸ್ಥಾಪನೆಗೊಂಡಿರುವ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ತುಳುವಿಗೆ ಸಂಬಂಧಪಟ್ಟಂತೆ ಬಹು ವಿಧ ಕ್ಷೇತ್ರದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯ ರಕ್ಷಣೆ ಮತ್ತು ಪೋಷಣೆಗೆ ಪೂರಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಾ ಬಂದಿದೆ. ತುಳು ಭಾಷಿಕರು ತಮ್ಮ ಮಾತೃಭಾಷೆಯ ಜತೆ ಜತೆಗೆ ಕನ್ನಡ ಮತ್ತಿತರ ಭಾಷೆಗಳ ಬೆಳವಣಿಗೆಗೂ ಕೊಡುಗೆ ನೀಡುತ್ತಾ ತುಳುವೇತರ ಜನತೆಯ ಜತೆಗೆ ಸುಂದರ ಬದುಕನ್ನು ಕಟ್ಟಿಕೊಂಡಿರುವುದು ತುಳು ಮನಸ್ಸಿನ ಹೆಗ್ಗಳಿಕೆ ಆಗಿರುತ್ತದೆ.

ತುಳುವರ ಬಹುಕಾಲದ ಬೇಡಿಕೆಯಾಗಿರುವ ಸಂವಿಧಾನದ 8ನೇ ಪರಿಚ್ಛೇದಕ್ಕೆ ತುಳು ಸೇರ್ಪಡೆಗೊಳಿಸುವ ಕನಸಿಗೆ ಶಕ್ತಿ ಒದಗಿಸುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ತುಳು ಸಾಹಿತ್ಯ ಸೃಷ್ಟಿಯಾಗಬೇಕಾಗಿದೆ. ಇಂತಹ ಸನ್ನಿವೇಶದಲ್ಲಿ ಹಿರಿಯ ಸಂಶೋಧಕರು ಮತ್ತು ನಮ್ಮ ತುಳು ಅಕಾಡೆಮಿಯ ಮಾಜಿ ಅಧ್ಯಕ್ಷರೂ ಆಗಿರುವ ಡಾ. ವಾಮನ ನಂದಾವರ ಅವರ ಕೃತಿಯನ್ನು ಅಕಾಡೆಮಿ ವತಿಯಿಂದ ಪ್ರಕಟಿಸುತ್ತಿರುವುದು ಸಕಾಲಿಕ ಎಂದು ಭಾವಿಸುತ್ತೇವೆ. ಇದನ್ನು ಪ್ರಕಟಿಸಲು ಅನುಮತಿ ನೀಡಿ ಅನುವಾದಿಸಿ ಸಹಕರಿಸಿರುವ ಡಾ. ವಾಮನ ನಂದಾವರ ಅವರಿಗೆ, ಅಂದವಾಗಿ ಮುದ್ರಿಸಿ ಕೊಟ್ಟಿರುವ ಆಕೃತಿ ಪ್ರಿಂಟ್ಸ್‌ನ ಶ್ರೀ ಕಲ್ಲೂರು ನಾಗೇಶರವರಿಗೂ, ಅಕಾಡೆಮಿಯ ಯೋಜನೆಗಳಲ್ಲಿ ಸಹಕರಿಸುತ್ತಿರುವ ಅಕಾಡೆಮಿ ಸದಸ್ಯರಿಗೂ ಅಕಾಡೆಮಿಯ ಅಧಿಕಾರಿ, ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮಂಗಳೂರು
20-01-2018

ಎ.ಸಿ. ಭಂಡಾರಿ
ಅಧ್ಯಕ್ಷರು
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮನದಾಳದ ಮಾತುಗಳು

ತುಳು ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ವಿಪುಲ ಪ್ರಮಾಣದ ಅದ್ಭುತರಮ್ಯ ದಂತಕತೆಗಳಿವೆ, ಕಲ್ಪಕತೆಗಳಿವೆ. ಅಂಕತಂಕದ ವೀರ ಶೂರರ ಚರಿತ್ರೆಗಳಿವೆ. ಇಲ್ಲಿನ ಒಂದು ಮುಡಿ ಕತೆಗಳೆಲ್ಲ ನಾನು ಬಾಲ್ಯದಿಂದಲೂ ಕೇಳಿ ತಿಳಿದುಕೊಂಡವುಗಳು. ಈ ಕತೆಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ನನಗೆ ನಿರೂಪಿಸಿರುವ ಪೈಲುವಾನ್ ಸೇಸಪ್ಪ ಶೆಟ್ಟಿ ಕೃಷ್ಣಾಪುರ, ರಾಮದಾಸ ಬಿಜೈ, ಕೆ. ಬ್ರಹ್ಮಾನಂದ, ಬೊಮ್ಮಯ ಕಾರ್ನಾಡ್, ಮೋಹನದಾಸ ಸುರತ್ಕಲ್, ಮಾಂಗಾಜೆ ಬಾಬು ಮತ್ತು ನನ್ನ ತಾಯಿ ಪೂವಕ್ಕ, ತಂದೆ ಬಾಬು ಬಾಳೆಪುಣಿ ಹಾಗೂ ಭಾವ ಕೆ.ವಿ. ಚಿತ್ತರಂಜನ್ ದಾಸ್ ಮೊದಲಾದವರನ್ನು ಈ ಹೊತ್ತು ಇಲ್ಲಿ ಸ್ಮರಿಸಿಕೊಳ್ಳುತ್ತಿದ್ದೇನೆ.

ಈ ಎಲ್ಲ ಕತೆಗಳು ಈ ಹಿಂದೆ ಸುರತ್ಕಲ್ಲಿನ ಪುರವಾಣಿ ಪತ್ರಿಕೆ, ಮಂಗಳೂರು ಮಿತ್ರ, ಸಂಜೆ ಅಲೆ, ಮೀನಾವಳಿ ಮೊದಲಾದ ಪತ್ರಿಕೆಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿರುತ್ತವೆ. ಈ ಎಲ್ಲ ಪತ್ರಿಕೆಗಳ ಸಂಪಾದಕರುಗಳಿಗೆ ನನ್ನ ಕೃತಜ್ಞತೆಗಳು.

ತಲೆಮಾರಿನ ಪೀಳಿಗೆಗೆ ತುಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಅಭಿಮಾನ ಮೂಡಿಸುವ ಈ ಕೃತಿ ಬಹುಮುಖ್ಯವಾಗಿದೆ ಅಂದುಕೊಂಡಿದ್ದೇನೆ. ಇವುಗಳಲ್ಲಿ ಕೆಲವು ಕತೆಗಳು ಈಗಾಗಲೇ ಪ್ರಕಟವಾಗಿರುವ ನನ್ನ ತುಳುಟು ಪನಿಕತೆ (1988) ಹಾಗೂ ಒಂಜಿ ಕೋಪೆ ಕತೆಕುಲು (1988) ಕೃತಿಗಳಲ್ಲಿ ಪ್ರಕಟಗೊಂಡಿವೆ.

ಈ ತುಳುಕತೆಗಳನ್ನು ಕನ್ನಡ ಭಾಷೆಗೆ ಅನುವಾದಿಸಿರುತ್ತೇನೆ. ಅವು 'ನಗೆ ಬಗೆಯ ಕತೆಗಳು' ಎನ್ನುವ ಶೀರ್ಷಿಕೆಯಲ್ಲಿ ಈಗ ಪ್ರಕಟಗೊಳ್ಳುತ್ತಿವೆ. ಇಷ್ಟು ಮಾತ್ರವಲ್ಲದೆ ಈ ಕತೆಗಳು ತುಳು ಭಾಷೆಯಿಂದ ಇತರ ಭಾಷೆಗಳಿಗೆ ತರ್ಜುಮೆಯಾಗಬೇಕು ಎನ್ನುವ ಉದ್ದೇಶದಿಂದ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ ಹಿಂದಿ ಪ್ರಾಧ್ಯಾಪಕಿಯಾಗಿದ್ದ ಡಾ. ಸ್ಮಿತಾ ಚಿಪ್ಳೂಣ್ಕರ್ ಹಿಂದಿ ಭಾಷೆಗೂ; ಮೂಡುಬಿದಿರೆ MITE ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ. ಸೌರಭ್ ಆರ್. ಚಿಪ್ಳೂಣ್ಕರ್ ಅವರು

ಇವನ್ನು ಆಂಗ್ಲಭಾಷೆಗೂ ಭಾಷಾಂತರ ಮಾಡಿರುತ್ತಾರೆ. ಇವರಿಗೂ ನಾನು ಆಭಾರಿಯಾಗಿದ್ದೇನೆ. ಈ ಪ್ರಕ್ರಿಯೆಯಲ್ಲಿ ನನಗೆ ಸಹಕರಿಸಿರುವ ಡಾ. ಸಾಯಿಗೀತಾ ಹೆಗ್ಡೆ, ಶ್ರೀಮತಿ ಮಮತಾ ರೈ, ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀಮತಿ ಕೆ. ಕವಿತಾ ಇವರಿಗೂ ನನ್ನ ಕೃತಜ್ಞತೆಗಳು. ಹೀಗೆ ನಾಲ್ಕು ಭಾಷೆಗಳಲ್ಲಿ ಈ ಕತೆಗಳು ಓದುಗರಿಗೆ ಲಭಿಸುತ್ತವೆ. ಇವು ಕಿರುಗತೆಗಳೂ ಹೌದು ಕಿಡಿಕತೆಗಳೂ ಹೌದು, ಮಿಡಿಕತೆಗಳೂ ಹೌದು. ಇಲ್ಲಿ 42 ಕತೆಗಳಿರುವುದರಿಂದ ಒಂದು ಮುಡಿಕತೆಗಳೂ ಹೌದು.

ಈ ಕಿರುಗತೆಗಳ ಕೃತಿಗೆ 'ನಗೆಬಗೆಯ ಕಿರುಗತೆಗಳು' ಎಂಬ ಶೀರ್ಷಿಕೆಯಡಿಯಲ್ಲಿ ಮುನ್ನುಡಿ ಬರೆದಿರುವ ನನ್ನ ಮಾರ್ಗದರ್ಶಕರೂ ಹಂಪಿ ಕನ್ನಡ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳೂ ಆಗಿರುವ ಪ್ರೊ. ಬಿ.ಎ. ವಿವೇಕ ರೈ ಅವರಿಗೆ ಪ್ರೀತಿಯ ಕೃತಜ್ಞತೆಗಳು.

ಈ ನಾಲ್ಕು ಭಾಷೆಗಳ ಪುಸ್ತಕಗಳನ್ನು ಅಚ್ಚು ಮಾಡಿಸಿ ಬಿಡುಗಡೆ ಗೊಳಿಸುವ ವ್ಯವಸ್ಥೆ, ಜವಾಬ್ದಾರಿಯನ್ನು ವಹಿಸಿಕೊಂಡಿರುವ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎ.ಸಿ. ಭಂಡಾರಿ ಯವರಿಗೂ, ರಿಜಿಸ್ಟ್ರಾರ್ ಚಂದ್ರಹಾಸ ರೈ ಬಿ.ಯವರಿಗೂ, ಅಕಾಡೆಮಿಯ ಸರ್ವಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ.

ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಆಕೃತಿ ಪ್ರಿಂಟ್ಸ್‌ನ ಶ್ರೀ ಕಲ್ಲೂರು ನಾಗೇಶ, ಅವರ ಸಿಬ್ಬಂದಿಗಳಾದ ಶ್ರೀಮತಿ ಭಾರತಿ, ಶ್ರೀಮತಿ ಗಾಯತ್ರಿ ಮತ್ತು ಕುಮಾರಿ ನವ್ಯಶ್ರೀಯವರಿಗೆ ನನ್ನ ಕೃತಜ್ಞತೆಗಳು.

ಈ ಕೃತಿಗಳನ್ನು ಓದುವ, ವಿಮರ್ಶಿಸುವ ನನ್ನಾಕೆ ಚಂದ್ರಕಲಾ ನಂದಾವರ, ಮಗಳು ಹೇಮಶ್ರೀ, ಮಗ ಸುಧಾಂಶು, ಸೊಸೆ ದೀಪ್ತಿ, ಓದಿಸಿಕೊಂಡು ಕೇಳುವ ಸಾಹಿತ್ಯಾಭಿಮಾನಿ ಅಳಿಯ ಭಾಷ ಹಾಗೂ ಪ್ರಕಾಶನದ ಎಲ್ಲ ಓದುಗರಿಗೂ ನನ್ನ ಪ್ರೀತಿಯ ವಂದನೆಗಳು. ತನ್ನ ಆಟಿಕೆಗಳ ಜೊತೆಗೆ ಇಂತಹ ಪುಸ್ತಕಗಳನ್ನೂ ಜೋಡಿಸಿಕೊಂಡು ಎತ್ತಿ ಆಡುತ್ತಿರುವ ಮುದ್ದು ಮೊಮ್ಮಕ್ಕಳಾದ ಮೆರಾಕಿ ಮತ್ತು ಹಿರಣ್ಯಳಿಗೆ ಕೊಡುಗೆಯಾಗಿ ಇಲ್ಲಿನ ಕತೆಗಳನ್ನು ನೀಡುತ್ತಿದ್ದೇನೆ. ಹಾಗೆಯೇ ತುಳು ಕನ್ನಡ, ಹಿಂದಿ, ಆಂಗ್ಲ ಭಾಷೆಯನ್ನು ಕೇಳಿಸಿಕೊಳ್ಳುವ, ಓದಿಕೊಳ್ಳುವ ಎಲ್ಲ ಮಕ್ಕಳಿಗೂ ನನ್ನ ಶುಭ ಹಾರೈಕೆಗಳು.

ಮಂಗಳೂರು — ವಾಮನ ನಂದಾವರ

10 ಜನವರಿ 2018

ಪುಟನೋಟ

1. ಸಾಧ್ಯವಾದರೆ ಹೇಳ ಇಲ್ಲದಿದ್ದರೆ ಬಿಡಿ 1

2. ಮಂತ್ರದ ಬೀಸುಗತ್ತಿ 2

3. ಹೆಣ್ಣೂ ಸಿಗಲಿಲ್ಲ ಮಣ್ಣೂ ಸಿಗಲಿಲ್ಲ 3

4. ಮಾರಿಗುಡಿಯಲ್ಲೊಂದು ಸರ್ಕಲ್ ಕಟ್ಟೆ 4

5. ಸಿಪ್ಪೆಯಲ್ಲಿ ತುಂಬುವಷ್ಟು ಅವಲಕ್ಕಿ ಯಾರು ತಿನ್ನುವಿರಿ? 5

6. ಹಿಡಿ ಭೂತವೇ ಹಿಡಿ! ತಪ್ಪು ಕಾಣಿಕೆ ಹಿಡಿ! 5

7. ಕುಶಾಲು ಹೋಗಿ ಗಾತಿಯಾಯಿತು 6

8. ನಿಮ್ಮ ಹಿಂಡಿನಲ್ಲಿ
ಕೋಣ ಕರು ಹಾಕಿ ನೆಕ್ಕುತ್ತಿದೆ 7

9. ಇದನ್ನು ಪೂರಾ ನಾನು ತಿಂದು ಬಿಡಲೇ? 8

10. ಅತ್ತೆಯ ಮಾತು ಕೇಳುವಾಗ
ನನ್ನ ಮಡಿಲಲ್ಲಿ ಉರಿ ಏಳುತ್ತದೆ 9

11. ಅತ್ತೆಗೆ ಮರು ಬಡಿಸಲು ಬಂದ ಸೊಸೆ 9

12. ನಾನು ಈ ಮನೆಯ ಒಡತಿ ಗೊತ್ತಾಯಿತೆ? 10

13. ಕಬ್ಬು ಕದ್ದುದು ಜಾರು ನೋಡಿ 11

14. ಭಟ್ಟರ ಮೇಲೆ ಕೋಪ! ಜಳಕಕ್ಕೆ ನೀರಿಲ್ಲ! 12

15. ಅಪ್ಪ ಎಲ್ಲೂ ಇಲ್ಲ, ಕೋಳಿ ಗೂಡಲ್ಲೂ ಇಲ್ಲ! 12

16. ನೆಂಟನನ್ನು ಕಟ್ಟು! ದೊಣ್ಣೆಯನ್ನು ಹುಡುಕು! 13

17. ಮದುವೆ ಮನೆಯಲ್ಲಿ ಅಳಿಯನ ಉಭಯ ಸಂಕಟ! 14

18. ಇಲ್ಲಿಂದ ಮೇಲೆಯೂ ನನ್ನದೇ, ಕೆಳಗೂ ನನ್ನದೇ! 15

19. ಉಮಿಯಿಂದ ಹಗ್ಗ ಬಿಟ್ಟು ಕೊಡಬೇಕು 17

20. ಇಬ್ಬರಿಗೆ ಗಂಡ, ತಲೆಗೆ ಟೊಪ್ಪಿ 18

21. ಎಂಕು ಪಣಂಬೂರಿಗೆ ಹೋದ ಹಾಗೆ! 19

22. ಆಚಕ್ಕ ಮಲಗಿದ್ದಾಳೆ; ನಾನು ಕುಳಿತಿದ್ದೇನೆ! 20

23. ನಿನ್ನ ಒಂದು ಪಕ್ಕೆ ತುಂಬದೇ ಹೋಗಲಿ! 21

24. ಹಗ್ಗವನ್ನೇ ತಿಂದು ಹಗ್ಗ ಎಲ್ಲಿ ಕೇಳಿದಳು 23

25. ಬಂಗರ ಚೌಟರ ಸುದ್ದಿ ನಿಂಗ್ಯಾಕ ಮಾಣಿ!
ನೀ ಒಮ್ಮೆ ಉಣ್ಣು ಮಾಣಿ! 24

26. ಅಣ್ಣನಿಗೆ ಶನಿವಾರ, ಹೆಣ್ಣು ನಾಯಿಗೆ ಫಲಾಹಾರ,
ಅತ್ತೆಗೆ ಪೆಟ್ಟೇ ಪೆಟ್ಟು 25

27. ವೈದ್ಯರ ಕೈಗುಣ 26

28. ಮನುಷ್ಯನಿಗಿಂತ ದೊಡ್ಡ ಭೂತವಿದೆಯೆ? 27

29. ಊಟವಾದ ಕೂಡಲೇ ಮಲಗಬೇಕು,
ಎದ್ದ ಕೂಡಲೇ ಊಟ ಮಾಡಬೇಕು! 28

30. ಸಮಾರಂಭದಲ್ಲಿ ತೋರಿಸಿದ ಆಭರಣಗಳು 30

31. ಅಗಸನ ಕೈ ಶುದ್ಧ, ಬ್ರಾಹ್ಮಣನ ಬಾಯಿ ಶುದ್ಧ 31

32. ಎತ್ತಿನ ಗಾಡಿಯಲ್ಲಿ ಹೆಣ್ಣಿನ ವೇಷ 32

33. ಮಂತ್ರವಾದಿ ಮಾದಪ್ಪಯ್ಯರು ಮತ್ತು ಬ್ರಹ್ಮರಾಕ್ಷಸ 33

34. ಮೂರು ಬಾರಿ ಸ್ನಾನ, ಒಮ್ಮೆ ಊಟ 34

35. ಹೆಂಡತಿಯಲ್ಲಿ ಪ್ರೀತಿಯೋ, ಮಕ್ಕಳಲ್ಲೋ? 35

36. ಕುಷ್ಠರೋಗಿಯಾದ ನರಿ 36

37. ನರಿ ಹೇಳಿದ ಹರಕೆ 37

38. ನಿನಗೆ ನೆನೆದಾಗ ಮರಣ! 38

39. ಕೊಡವಿ ಎದ್ದಿತು ಕುದುಂಬುಳು ಹಕ್ಕಿ 39

40. ಇದರಲ್ಲಿ ಉಳಿದರೆ ನಾಲ್ಕು, ಇಲ್ಲವಾದರೆ ಮೂರು 40

41. ಲೋಕ ಕಾಯುವ ಏಡಿ 41

42. ಕಬ್ಬು ತಿಂದುಕೊಂಡು ಬಾ ಎಂದರೆ
ಕಡ್ಡೆ ತಿಂದು ಬಂದನಂತೆ 42

ಸಾಧ್ಯವಾದರೆ ಹೇಳಿ ಇಲ್ಲದಿದ್ದರೆ ಬಿಡಿ

ನಮ್ಮ ಜನಪದರು ಕೆಲಸ ಮಾಡುತ್ತಿರುವಾಗ ಒಂದು ತಮಾಷೆ, ಒಂದು ಕುಶಾಲು ಹುಟ್ಟೀತು. ಒಂದು ಕತೆ ನಡೆದೀತು.

ಒಂದು ಮನೆಯ ಅಂಗಳದಲ್ಲಿ ಬಡಗಿಯೋರ್ವ ಒಮ್ಮೆ ಮರದ ಕೆಲಸ ಮಾಡುತ್ತಿದ್ದರು. ಹೀಗಿರಲು ನೆರೆಕರೆಯ ಮನೆಯವರು ಬಂದು ಸೇರಿದರು. ಆಗ ಆ ಬಡಗಿಗೆ ಒಂದು ತಮಾಷೆ ಮಾಡಬೇಕೆಂದು ಕಂಡಿತು.

"ನಾನು ಕೆತ್ತುತ್ತಿರುವುದು ಯಾವ ಜಾತಿಯ ಮರ ಹೇಳಿ ನೋಡೋಣ" ಹೀಗೆ ಅವರಲ್ಲಿ ಕೇಳಿದರು. ಮರವನ್ನು ನೋಡಿ ಕೆಲವರು ಹಲಸು ಎಂದರು. ಕೆಲವರು ಹೆಬ್ಬಲಸು ಎಂದರು. ಕೆಲವರು ಬೀಟಿ ಎಂದು ಹೇಳಿದರು. ಅದಾವುದೂ ಅಲ್ಲ. ಅದನ್ನು ಯಾರಿಂದಲೂ ಹೇಳಲಾಗಲಿಲ್ಲ. ಆಗ ಆ ಬಡಗಿ, "ಸಾಧ್ಯವಾದರೆ ಹೇಳಿ ಇಲ್ಲದಿದ್ದರೆ ಬಿಡಿ" (ತೀರ್ಂಡ ಪನ್ಲೆ ಇಜ್ಜಿಂಡ ಬುಡಲೆ) ಹೀಗೆಂದು ಮತ್ತೂ ಮತ್ತೂ ಅದೇ ಮಾತು ಆಡಿದ. ಅಷ್ಟಾಗುವಾಗ ಕೆಲವರಿಗೆ ಅದು ಅರ್ಥವಾಯಿತು. ಅವರು ಕೆತ್ತುತ್ತಿದ್ದ ಮರ 'ಬುಡಲೆ' ಜಾತಿಯ ಮರವಾಗಿತ್ತು.



ಮಂತ್ರದ ಬೀಸುಗತ್ತಿ

ಸುಮಾರು ನೂರು ವರ್ಷದ ಮೊದಲು ಮಂತ್ರವಾದಿ ಮಾದಪ್ಪಯ್ಯ ಎನ್ನುವವರು ಇದ್ದರು. ಅವರು ಬಾರಿ ದೊಡ್ಡ ಕಾರಣಿಕದವರು. ಅವರಿಗೆ ಮನೆ ಇರಲಿಲ್ಲ. ಸ್ಮಶಾನ ಅಥವಾ ಶುಭಾರಂಭ ಆಗದ ಮನೆಯ ನೆಲದಲ್ಲಿ ಮಲಗುವುದು. ಒಂದಷ್ಟು ತರಗೆಲೆ ಕೆಳಗೆ ಹಾಕಿ ಹಾಸಿಗೆ ಮಾಡುತ್ತಿದ್ದರು. ಯಾರಾದರೂ ನಮಸ್ಕರಿಸಿದರೆ ಪ್ರತಿ ನಮಸ್ಕಾರ ಮಾಡದೆ "ನೀನು ಉದ್ಧಾರವಾಗು" ಎನ್ನುವರು. ಅವರು ಮೀಯಲು ನೀರಿಗೆ ಸಮಯ ನೋಡಿ ಇಳಿಯುವುದು, ಸಮಯ ನೋಡಿ ಮೇಲೆ ಬರುವುದು. ದಿನಕ್ಕೆ ಒಂದು ಸೇರು ಅಕ್ಕಿಯ ಅನ್ನ ಮಾಡ್ಯಾರು. ಮೇಲಿನ ಅರ್ಧ ಪಾವು ಜಾನುವಾರುಗಳಿಗೆ, ಅಡಿಭಾಗದ ಅರ್ಧ ಪಾವು ಮೀನುಗಳಿಗೆ ಹಾಕುವರು. ಮಕ್ಕಳು ಮರಿಗಳು ಯಾರಾದರೂ ಬಂದರೆ ಮುದ್ದೆ ಮಾಡಿ ಒಂದೊಂದು ತುತ್ತು ಕೊಡುವರು. ಎಡೆಬಿಡದೆ ಎರಡು ವರ್ಷ ಅವರ ಕೈಯಿಂದ ಹೀಗೆ ಒಂದೊಂದು ಮುದ್ದೆ ತಿಂದು ಬೆಳೆದವರು ಇದ್ದಾರೆ. ಅದುರ್ಕು ಎನ್ನುವ ಗುಡ್ಡದಲ್ಲಿ ಸೊಪ್ಪಿನ ರಾಶಿಯಲ್ಲಿ ಒಂದು ಬಾರಿ ಇವರು ಮಲಗಿಕೊಂಡಿದ್ದಾಗ ಜೋಡಿ ಹುಲಿಗಳು ಬಂದುವು. ಆಗ ಮಾದಪ್ಪಯ್ಯರು ಬೀಸುಗತ್ತಿ(ಬೀಸತ್ತಿ)ಯನ್ನು ಮಂತ್ರಿಸಿ ತಲೆದಿಂಬಿನಡಿಯಲ್ಲಿ ಇಟ್ಟರು. ಸೊಪ್ಪಿಗೆ ಬಂದವರು ಹುಲಿಗಳನ್ನು ನೋಡಿ ಕೋವಿ ತಂದರು. ಮಾದಪ್ಪಯ್ಯರನ್ನು ಹುಲಿಗಳು ಕೊಂದುವೆಂದು ಅವರು ಎಣಿಸಿದರು. ಅಷ್ಟರಲ್ಲಿ ಮಾದಪ್ಪಯ್ಯರು ಕೋವಿ ತಂದವರನ್ನು "ನಿಲ್ಲಿ, ಹೊಡೆಯಬೇಡಿ!" ಎಂದರು. ತಲೆದಿಂಬಿನಡಿಯಲ್ಲಿಟ್ಟಿದ್ದ ಮಂತ್ರಿಸಿದ ಚೂರಿ ತೆಗೆದರು. ಹುಲಿಗಳ ಮುಂದೆ ಎಸೆದರು. ಹುಲಿಗಳು ಒಂದೇ ಸಮನೆ ಓಡಿದವು. ಎಲ್ಲಿ ಮಾಯವಾದವೋ ಏನೋ. ಕೋವಿ ತಂದ ಸೊಪ್ಪಿಗೆ ಬಂದಿದ್ದವರು ಚಕಿತರಾದರು.

ಹೆಣ್ಣೂ ಸಿಗಲಿಲ್ಲ ಮಣ್ಣೂ ಸಿಗಲಿಲ್ಲ

ಒಂದು ಊರು. ಆ ಊರಿಗೊಬ್ಬ ಅರಸ. ಅರಸನ ಊರಿಗೆ ಒಂದು ಹುಲಿ ನುಗ್ಗಿತು. ಹೀಗೆ ನುಗ್ಗಿದ ಹುಲಿ ಊರೆಲ್ಲ ಉಪದ್ರವ ಮಾಡಿತು. ಅದರ ಕಾಟ ಸಹಿಸಲಾಗಲಿಲ್ಲ. ಊರಿನವರೆಲ್ಲ ಹುಲಿಯನ್ನು ಕೊಲ್ಲಲು ಅರಸನಿಗೆ ದೂರು ಕೊಟ್ಟರು.

ಅರಸನಿಗೆ ಹುಲಿಯನ್ನು ಸಾಯಿಸಲು ತುಂಬಾ ಕಷ್ಟವಾಯಿತು. ಹಾಗಾಗಿ ಊರಿನುದ್ದಕ್ಕೂ ಡಂಗುರ ಸಾರಿದ.

"ಯಾರು ಈ ಊರಿನಲ್ಲಿರುವ ಹುಲಿಯನ್ನು ಕೊಂದು ಅದರ ಹಲ್ಲು ಮತ್ತು ಉಗುರು ತಂದು ಕೊಡುತ್ತಾರೋ ಅವರಿಗೆ ನನ್ನ ಮಗಳನ್ನೂ ಅರ್ಧ ರಾಜ್ಯದ ಪಟ್ಟವನ್ನೂ ಧಾರೆ ಎರೆದು ಕೊಡುತ್ತೇನೆ."

ಹುಲಿ ಕೊಲ್ಲಲು ತುಂಬಾ ಜನ ಸಾಹಸ ಮಾಡಿದರು. ಯಾರಿಂದಲೂ ಸಾಧ್ಯವಾಗಲಿಲ್ಲ. ಒಬ್ಬ ತರುಣ ಹೊಳೆಯ ಬದಿಯಲ್ಲಿ ನೀರು ಕುಡಿಯಲು ಬಂದಿದ್ದ ಹುಲಿಯನ್ನು ಹೇಗೋ ಕೊಂದು ಹಾಕಿದ; ಅದನ್ನು ಅಲ್ಲಿಯೇ ಬಿಟ್ಟು ಮುಂದೆ ಸಾಗಿದ.

ಇದನ್ನು ಗಾಡಿ ಓಡಿಸುವ ಒಬ್ಬಾತ ನೋಡಿದ. ಹುಲಿಯನ್ನು ಕೊಂದವನು ನಾನೆಂದು ಅರಸನ ಹತ್ತಿರ ಹೇಳಬೇಕು, ಅರಸನ ಮಗಳನ್ನು ಮದುವೆಯಾಗಬೇಕು. ಅರ್ಧ ರಾಜ್ಯದ ಪಟ್ಟವನ್ನು ಕೇಳಬೇಕೆಂದು ಹುಲಿಯ ಉಗುರು, ಹಲ್ಲು ಎಲ್ಲ ತೆಗೆದು ಅರಸನ ಬಳಿ ಧಾವಿಸಿದ.

ಅರಸನಿಗೆ ಈತನ ಮೇಲೆ ಸಂಶಯ. "ಹುಲಿಯನ್ನು ಹೇಗೆ ಕೊಂದೆ?" ಎಂದು ಕೇಳಿದ ಅರಸ. ಆಗ ಆತ "ಚಾಟಿ ತೆಗೆದದ್ದು, ರಪ ರಪ ಹೊಡೆದದ್ದು, ಹುಲಿ ಸತ್ತೇ ಹೋಯಿತು" ಎಂದ. ಅಷ್ಟರಲ್ಲಿ ಹುಲಿಯನ್ನು ಕೊಂದವನೇ ಸತ್ತ ಹುಲಿಯನ್ನು ತನ್ನ ಬೆನ್ನ ಮೇಲೆ ಹೇರಿಕೊಂಡು ಅಲ್ಲಿಗೆ ಬಂದು ಅರಸನ ಕಾಲಡಿಗೆ ಎಸೆದ. ಅರಸನಿಗೆ ತನ್ನಲ್ಲಿ ಅನುಮಾನ ಉಂಟಾದುದನ್ನು ತಿಳಿದ ಆತ ಅಲ್ಲಿಂದ ಒಂದೇ ಸಮನೆ ಓಟಕಿತ್ತ. "ಹೆಣ್ಣು ಸಿಕ್ಕಿದ ಮೇಲೆ ಈ ಗಾಡಿ ಯಾತಕ್ಕೆ? ಈ ಎತ್ತುಗಳು ಯಾತಕ್ಕೆ?" ಎಂದು ಗಾಡಿಯೊಂದಿಗೆ ಎತ್ತುಗಳನ್ನು ಒಂದು ಕಣಿವೆಗೆ ದೂಡಿದ್ದ. ಈಗ ಬೇರೆ ದಾರಿಯಿಲ್ಲದೆ, "ಹೆಣ್ಣೂ ಸಿಗಲಿಲ್ಲ, ಪಟ್ಟ (ಮಣ್ಣೂ)ವೂ ಸಿಗಲಿಲ್ಲ. ಬನ್ನಿ ಎತ್ತುಗಳೇ ಬನ್ನಿ" ಎಂದು ಮೇಲಕ್ಕೆ ಎಳೆಯುತ್ತ ತನ್ನ ಸೋಲನ್ನು ಶಪಿಸತೊಡಗಿದ.



ಮಾರಿಗುಡಿಯಲ್ಲೊಂದು ಸರ್ಕಲ್ ಕಟ್ಟೆ

ಸುಮಾರು ವರುಷಗಳ ಹಿಂದಿನ ಕತೆ. ಸುರತ್ಕಲ್ಲಿನಲ್ಲಿ ಒಂದಲ್ಲ, ಮೂರು ಮಾರಿಗುಡಿಗಳಿವೆ. ಮೂರನೇ ಮಾರಿಗುಡಿ ಕಟ್ಟಿಸಿ, ಒಕ್ಕಲಿನ ಪೂಜೆಗೆ ದಿವಸ ನಿಗದಿಯಾಗಿತ್ತು. ಹಾಗೆಯೇ ಹಿಂದೆ ಇದ್ದ ಹತ್ತಿರದ ಎರಡನೇ ಮಾರಿಗುಡಿಯಲ್ಲಿ ಅದೇ ದಿವಸಕ್ಕೆ ಮಹಾ ಪೂಜೆಗೆ ದಿನ ನಿಗದಿಯಾಗಿತ್ತು. "ಅಂಗಡಿಗೆ ಎದುರಂಗಡಿ" ಹೇಳಿದ ಹಾಗೆ ಆಯಿತು. ಅದು ದೊಡ್ಡ ಸಂಗತಿ. ಮತ್ಸರಕ್ಕೆ ಅಡಿಪಾಯ ಕಕ್ಷಿಗೆ ಕಾರಣ ಎಂದು ಎಲ್ಲರಿಗೂ ತಿಳಿದದ್ದೇ. ಗಲಾಟೆ ಪಸರಿಸುವ ಅಂದಾಜು ತಿಳಿದು ಸರಕಾರ ಮಧ್ಯ ಪ್ರವೇಶಿಸಬೇಕಾಯಿತು.

"ಹೊಸ ಪೂಜೆ ಹೊತ್ತಿಗೆ ಸರಿಯಾಗಿ ಮುಗಿಯಬೇಕು" ಆದೇಶ ಆಯಿತು. ಆದೇಶದ ಬೆನ್ನಿಗೆ ಮಾಗಣೆ ತನಿಖೆ ಅಧಿಕಾರಿಗಳೊಂದಿಗೆ ಪೋಲೀಸ್ ತಂಡ ಬಂತು. ಸುತ್ತುವರಿಯಿತು. ಉತ್ತರದ ಕಡೆಗೆ ವಾಲಿದ ಮಾಗಣೆ ತನಿಖೆಯವರು (ಸರ್ಕಲ್ ಇನ್ಸ್‌ಪೆಕ್ಟರ್)ಗಂಟೆಯ ಮುಳ್ಳನ್ನು ಹಿಂದಕ್ಕೆ ತಿರುಗಿಸಿದರಂತೆ. ಹೊತ್ತಿಗೆ ಮುನ್ನ ಹೊಸ ಗುಡಿಯ ಪೂಜೆಯನ್ನು ಮಾಡಿ ನಿಲ್ಲಿಸಲು ಒತ್ತಾಯ ಮಾಡಿದರಂತೆ. ದರ್ಶನದಲ್ಲಿದ್ದ ಪೂಜಾರಿಯಲ್ಲಿ ಮಾತುಕತೆ ನಡೆಸಿ, ದರ್ಶನ ನಿಲ್ಲಿಸಿದರಂತೆ.

ಇಲ್ಲಿಯ ಹೊಸ ಮಾರಿಯಮ್ಮನ ಪೂಜಾರಿಯವರಿಗೆ, ಭಕ್ತರಿಗೆ ಇದರಿಂದ ಕೋಪ ಬಂತು. ಅಮ್ಮನಿಗೆ ದೂರು ಕೊಡಲು ಹರಕೆ ಹೇಳಿದರು. ಆಗ ಪೋಲೀಸ್ ಮುಖ್ಯಸ್ಥನ ಭಾವನ ಮನೆಯಲ್ಲಿ ಏನೋ ಅನಾಹುತವಾಯಿತಂತೆ. ಇದರಿಂದ ರಾತ್ರಿಯೇ ಅವರು ಗುರಿಕಾರನಲ್ಲಿಗೆ ಓಡಿ ಬಂದರು. ಗುರಿಕಾರರು ದೇವಿಯ ಲೀಲೆ ಎಂದು ಹೇಳಿದರು. ಹಾಗೆ ತಪ್ಪಿತಸ್ಥರು ಮಾರಿಗುಡಿಗೆ ಬಂದು ದೇವಿಯ ಎದುರು ನಮಸ್ಕಾರ ಹಾಕಿ ತಪ್ಪು ಒಪ್ಪಿಕೊಂಡು ಮಾಫಿ ಕೇಳಿದರು.

ತನ್ನ ತಪ್ಪಿಗೆ ಸರಿಯಾಗಿ ಸ್ವಂತ ಖರ್ಚಿನಲ್ಲಿ ಮಹಾಪೂಜೆ ಮಾಡಿಸಿದರು. ಮರುವರ್ಷದ ಉತ್ಸವದ ಕಾಲದಲ್ಲಿ ದೇವಿಯ ಮೂರ್ತಿಯನ್ನು ಕೂರಿಸಲು ಕಲ್ಲಿನ ಒಂದು ಪೀಠ ಕಟ್ಟಿಸಿಕೊಟ್ಟರು. ಈ ಪೀಠವನ್ನು ಸರ್ಕಲ್ ಇನ್ಸ್‌ಪೆಕ್ಟರ್ ಕಟ್ಟಿಸಿಕೊಟ್ಟಿರುವುದರಿಂದ ಮುಂದೆ ಅದಕ್ಕೆ 'ಸರ್ಕಲ್ ಕಟ್ಟೆ' ಎಂದೇ ಹೆಸರಾಯಿತು.

ಸಿಪ್ಪೆಯಲ್ಲಿ ತುಂಬುವಷ್ಟು ಅವಲಕ್ಕಿ ಯಾರು ತಿನ್ನುವಿರಿ?

ಮದುವೆ ಮನೆಯಲ್ಲಿ ಹಿರಿಯರ ಕೂಟ ಒಂದೆಡೆ ಸೇರಿ ಏನೋ ಹರಟೆ ಹೊಡೆಯುತ್ತಿತ್ತು. ಅವರ ನಡುವೆ ಪಕ್ಕದಲ್ಲೇ ಹರಿವಾಣದಲ್ಲಿ ವೀಳ್ಯದೆಲೆ, ನೀರಲ್ಲಿ ಹಾಕಿದ ಅಡಿಕೆ, ಸುಣ್ಣದ ಕರಂಡಕ, ಹೊಗೆಸೊಪ್ಪು ಎಲ್ಲ ಇತ್ತು. ಮನೆಯ ಓರ್ವ ವ್ಯಕ್ತಿ ನೀರಲ್ಲಿ ಹಾಕಿದ ಅಡಿಕೆಯ ಸಿಪ್ಪೆ ಸುಲಿದು, ಅಡಿಕೆ ಹೋಳು ಮಾಡಿ, ಹರಿವಾಣದಲ್ಲಿ ಹಾಕುತ್ತಿದ್ದರು. ಆಗ ಅಡಿಕೆಯ ಸಿಪ್ಪೆಯನ್ನು ಎತ್ತಿಕೊಂಡ ಇನ್ನೊಬ್ಬರು ಅದನ್ನು ಎಲ್ಲರಿಗೂ ತೋರಿಸುತ್ತಾ ಒಂದು ಸವಾಲು ಒಡ್ಡಿದರು.

"ಯಾರು ಈ ಸಿಪ್ಪೆಯಲ್ಲಿ ತುಂಬುವಷ್ಟು ಅವಲಕ್ಕಿ ತಿನ್ನುವಿರಿ?"ಎಂದು ಕೇಳಿದಾಗ ಇದೇನು ತಮಾಷೆ ಮಾಡುತ್ತಿದ್ದಾರೆ ಎಂದುಕೊಂಡರು ಅಲ್ಲಿದ್ದ ಜನರು. ಅಂಗೈಯಗಲದಷ್ಟೂ ಇಲ್ಲದ ಈ ಸಿಪ್ಪೆಯಲ್ಲಿ ಹಿಡಿದರೂ ಎಷ್ಟು ಅವಲಕ್ಕಿ ಹಿಡಿದೀತು ಎಂದು ಹೀಗಳೆದರು.

ಈತ ಒಂದೆಡೆ ಅಂಗಳದ ಮಧ್ಯೆ ಕೂತು ಆ ಸಿಪ್ಪೆಯನ್ನು ಇಟ್ಟು ಅದನ್ನು ಗುದ್ದಿ ಗುದ್ದಿ ಸಡಿಲುಗೊಳಿಸಿ ಹರಡಲು ಪ್ರಯತ್ನಿಸಿದ. ಅದು ಒಂದಷ್ಟು ಜಾಗವನ್ನು ವ್ಯಾಪಿಸಿಕೊಂಡಾಗ ಎಲ್ಲರಿಗೂ ಅಚ್ಚರಿ. ಒಂದು ಕಳಸಿಗೆಗೂ (14 ಸೇರು) ಮಿಕ್ಕಿ ಅವಲಕ್ಕಿ ಹಿಡಿಯುವಷ್ಟು ವ್ಯಾಪ್ತಿಯಲ್ಲಿ ಸಿಪ್ಪೆ ಹರಡಿಕೊಂಡಿತ್ತು. ತಮಾಷೆ ಮಾತನಾಡಿ ಬುದ್ಧಿವಂತಿಕೆಯಲ್ಲಿ ಸೋಲಿಸುವ ಕೌಶಲವನ್ನು ನಮ್ಮ ಜನರು ಮೈಗೂಡಿಸಿಕೊಂಡಿದ್ದರು ಎನ್ನುವುದು ಇಲ್ಲಿ ಪ್ರಕಟವಾಗುತ್ತದೆ.

ಹಿಡಿ ಭೂತವೇ ಹಿಡಿ! ತಪ್ಪು ಕಾಣಿಕೆ ಹಿಡಿ!

ಒಂದು ಬಾರಿ ನೇಮದ ಕಳದಲ್ಲಿ ನಡೆದ ಕತೆಯಿದು. ಗುತ್ತು ಬರ್ಕೆಯವರು ಒಂದು ಕಟ್ಟೆಯಲ್ಲಿ ಕುಳಿತಿದ್ದರು. ಸುತ್ತ ಮುತ್ತ ಹತ್ತು ಸಮಸ್ತ ಪರಿವಾರ ಸೇರಿದ್ದಾರೆ.

ಕೂಟದ ಕಳದಲ್ಲಿ ವೃದ್ಧರೊಬ್ಬರು ಹೂಸು ಬಿಟ್ಟರೆಂದು ಕಟ್ಟೆಯಲ್ಲಿದ್ದವರು ಗುಲ್ಲೆಬ್ಬಿಸಿದರು.

"ಇಂತಹ ಸತ್ಯದ ಕಳದಲ್ಲಿ ಹೂಸು ಬಿಡುವುದೆಂದರೇನು? ತಪ್ಪು ಒಪ್ಪಿಸಿಯೇ ತೀರಬೇಕು" ಎಂದು ಗುತ್ತಿನವರೆಲ್ಲ ತಪ್ಪು ಸ್ಥಾಪನೆ ಮಾಡಿದರು.

ಮರುದಿನ ವೃದ್ಧರು ಒಂದು ದೋಟಿಯ ತುದಿಯಲ್ಲಿ ನಾಲ್ಕಾಣೆಯ ಗಂಟೊಂದನ್ನು ಕಟ್ಟಿ ಭೂತದ ನೇಮದ ಸಮಯದಲ್ಲಿ ದೂರನಿಂತು ದೋಟಿಯನ್ನು ಚಾಚಿ ಹೀಗೆ ಬಿನ್ನವಿಸಿಕೊಂಡರು:

"ನಂಬಿಗೆಯ ಪಂಜುರ್ಲಿ ನೀನೂ ಹೌದು, ಹರೆಯದ ಹಿರಿಯನು ನಾನೂ ಹೌದು, ದೋಟಿಯ ತುದಿಯಲ್ಲಿ ಹೂಸಿನ ದಂಡನೆಯ ಕಾಣಿಕೆಯಿದೆ, ಹಿಡಿ ಭೂತವೇ ಹಿಡಿ!"

ಭೂತ ದೋಟಿಯ ತುದಿಗೆ ಆನಿಸಿ ನೋಡಿತು. ಹಣದ ಗಂಟು ಎಟುಕದು. ಕೈನೀಡಿ ಒಪ್ಪಿಸಲು ವೃದ್ಧನಿಗೆ ಆಗದು. ಹತ್ತು ಸಮಸ್ತರು ಇದನ್ನು ನೋಡಿ ಏನು ಮಾಡುವುದೆಂದು ಕಂಗಾಲಾದರು.

ಭೂತ ಅಣಿ ಕುಲುಕಿಸಿ, ಗಗ್ಗರ ಅಲ್ಲಾಡಿಸಿ, ಆರ್ಭಟಿಸಿ, ಅಪ್ಪಣೆ ಕೊಟ್ಟಿತು:

"ಇನ್ನು ಮುಂದಕ್ಕೆ ಕಟ್ಟೆಯಲ್ಲಿ ಯಾರೂ ಹೂಸು ಬಿಡಬಾರದು!"

ಕುಶಾಲು ಹೋಗಿ ಗಾತಿಯಾಯಿತು

ಒಂದು ಬಾರಿ ಅಂಗಡಿಗೆ ಬಂದವನು ತೂಗಾಡುತ್ತಿದ್ದ ಗೊನೆಯಿಂದ ಹಣ್ಣೊಂದನ್ನು ಕಿತ್ತು ತಿಂದುಬಿಟ್ಟ. ಆತ ಅಂಗಡಿಯ ಯಜಮಾನನಲ್ಲಿ ಕೇಳಿರಲಿಲ್ಲ. ಯಾವಾಗಲೂ ಬರುತ್ತಿರುವ ಸಲುಗೆಯಿಂದ ಹಾಗೆ ಕೇಳದೆ ಈತ ಹಣ್ಣು ಕಿತ್ತು ತೆಗೆದಿದ್ದ.

ಆದರೆ ಅಂಗಡಿಯಾತನಿಗೆ ಬಾಳೆಹಣ್ಣಿನ ದುಡ್ಡು ಕೊಡಲು ಹೋದಾಗ ಆತ ಹೀಗೆ ರೇಗಾಡಿದ, "ಯಾರಲ್ಲಿ ಕೇಳಿ ನೀನು ಬಾಳೆಹಣ್ಣು ಕಿತ್ತದ್ದು ಮತ್ತು ತಿಂದದ್ದು? ಏನೆಂದುಕೊಂಡೆ ನೀನು? ನೋಡು, ಕೇಳದೆ ತಿಂದುದಕ್ಕೆ ನೂರು ರೂಪಾಯಿ ದಂಡ ನೀಡಬೇಕು".

ಈತ, "ಆಗಲಿ ಮಹಾರಾಯ, ಕೊಡೋಣ" ಎಂದ

ಅಷ್ಟರಲ್ಲಿ ಏನಾಗಿದೆ ಎಂದರೆ ಅಂಗಡಿಯಾತ ಅಲ್ಲೇ ಕಂಬಕ್ಕೆ ಕಟ್ಟಿ ಹಾಕಿದ್ದ ತನ್ನ ದನ, ಈತ ತಿಂದು ಹಾಕಿದ್ದ ಬಾಳೆಹಣ್ಣಿನ ಸಿಪ್ಪೆಯನ್ನು ನುಂಗಿಬಿಟ್ಟಿತ್ತು. ಇದನ್ನು ಈತ ನೋಡಿದ್ದ. ಹಾಗಾಗಿ ಅವನಿಗೂ ಒಳ್ಳೆಯ ಅಸ್ತ್ರ ಸಿಕ್ಕಿತು,

"ನೋಡಯ್ಯಾ, ಈಗ ನೀನೇ ನನಗೆ ನೂರು ರೂಪಾಯಿ ನೀಡಬೇಕಾಗಿದೆ. ನೋಡು! ನಿನ್ನ ದನ ಏನು ಮಾಡಿದೆ ಗೊತ್ತಾ? ನನ್ನ ಬಾಳೆ ಹಣ್ಣಿನ ಸಿಪ್ಪೆಯನ್ನು ನುಂಗಿಬಿಟ್ಟಿದೆ. ನನಗೇ ನೀನು ದಂಡ ಕೊಡಬೇಕು" ಎನ್ನಬೇಕೇ ಈತ? ಹಾಗಾಗಿ ಈತನ ದಂಡ ಆತನ ದಂಡ ಸರಿಸಮವಾಗಿ ನ್ಯಾಯ ಇತ್ಯರ್ಥವಾಯಿತು.



ನಿಮ್ಮ ಹಿಂಡಿನಲ್ಲಿ ಕೋಣ ಕರು ಹಾಕಿ ನೆಕ್ಕುತ್ತಿದೆ

ಪಂಜದ ಪದವಿನಲ್ಲಿ ಕೋಟಿಚೆನ್ನಯ ಯಮಳ ವೀರರು ಸಾಗುತ್ತಿದ್ದಾರೆ. ಸಾವಿರ ನಡೆ ಗೋವಳರು ಇದ್ದಾರೆ. ತಮ್ಮ ಚೆನ್ನಯ ಅಣ್ಣ ಕೋಟಿಯಲ್ಲಿ, ನಾವು ಅವರಲ್ಲಿ 'ಸದ್'ರ್‌ಗೆ ಸಂದಾಯ' (ಪ್ರಶ್ನೆಗೆ ಉತ್ತರ) ಕೊಡಲು ಹೋಗೋಣ ಎನ್ನುತ್ತಾನೆ.

"ನೋಡಿ ಗೋವಳ ಮಕ್ಕಳೇ, ನಿಮ್ಮ ಗೋಮಂದೆಯಲ್ಲಿ ಕೋಣ ಕರು ಹಾಕಿ ನೆಕ್ಕಿ, ಮೂಸಿ ನೋಡುತ್ತಿದೆ. ನೋಡಿದಿರಾ?" ಎನ್ನುತ್ತಾನೆ.

ಅದಕ್ಕೆ ಗೋವಳರು, "ನೋಡಿ ಬಂಟರೇ, ಪಡು ದಿಕ್ಕಿನಲ್ಲಿ ಕಡಲಿಗೆ ಬೆಂಕಿ ಬಿದ್ದಿದೆ" ಎಂದು ಎದುರು ಸವಾಲು ಹಾಕುತ್ತಾರೆ.

ಇವರ ಸವಾಲು ಅವರಿಗೆ ಅರ್ಥವಾಗಲಿಲ್ಲ, ಅವರ ಸವಾಲು ಇವರಿಗೆ ಅರ್ಥವಾಗಲಿಲ್ಲ. ಆಗ ಅವರು ಪರಸ್ಪರ ಸವಾಲಿನ/ಒಗಟಿನ ಅರ್ಥಗಳನ್ನು ಹಂಚಿಕೊಂಡರು.

"ನಿಮ್ಮ ಉತ್ತರ ನೀವು ಹೇಳಿ, ನಮ್ಮ ಉತ್ತರ ನಾವು ಹೇಳುತ್ತೇವೆ" ಎಂದು ಮಾತನಾಡಿಕೊಂಡರು.

ಕೋಣ ಕರು ಹಾಕಿ ನೆಕ್ಕುತ್ತಿದೆ ಎಂದರೆ ಕೋಣ ಸೆಗಣಿ ಹಾಕಿ ಮೂಸಿ ನೋಡುತ್ತಿದೆ. ಮೊದಲ ಒಗಟಿನ ಉತ್ತರವಿದು.

ಕಡಲಿಗೆ ಬೆಂಕಿ ಬಿದ್ದು ಉರಿಯುತ್ತಿದೆ ಎಂದರೆ ಸೂರ್ಯಾಸ್ತದ ಹೊತ್ತಿನಲ್ಲಿ ಪಡುವಣ ದಿಕ್ಕಿನಲ್ಲಿ ಬಾನಲ್ಲಿನ ಬೆಂಕಿಯ ಬಣ್ಣ ಕಡಲಿನಲ್ಲಿ ಪ್ರತಿಫಲಿಸುವುದು. ಇವು ಚಮತ್ಕಾರದ ಮಾತುಗಳು.

ಇದನ್ನು ಪೂರಾ ನಾನು ತಿಂದು ಬಿಡಲೇ?

ಹಳ್ಳಿಗಳಲ್ಲಿ ಸಂಜೆಯ ಹೊತ್ತು ಅಂಗಡಿ ಬಾಗಿಲಲ್ಲಿ ಕುಳಿತು ಪಟ್ಟಾಂಗ ಹೊಡೆಯುವುದು ಹಳ್ಳಿಗರ ಹವ್ಯಾಸಗಳಲ್ಲಿ ಒಂದು. ಅಂಗಡಿ ಬಾಗಿಲಲ್ಲಿ ಬಾಳೆಹಣ್ಣಿನ ಗೊನೆ ತೂಗಾಡಿಸಿರುವುದನ್ನು ನೋಡಿದಾತ ಒಂದು ಬಾರಿ ಹೀಗೆ ಉದ್ಗಾರ ತೆಗೆದ, "ಇದನ್ನು ಎಲ್ಲ ನಾನು ತಿಂದು ಬಿಡಲೆ?" ಆ ಗೊನೆಯನ್ನು ಕಂಡಾಗ ಅವನಿಗಾದ ಕುಶಿಯಲ್ಲಿ ಬಂದ ಉದ್ಗಾರವದು.

ಅಷ್ಟರಲ್ಲಿ ಅಲ್ಲಿ ಕುಳಿತಿದ್ದ ಇನ್ನೊಬ್ಬ, "ನೀನು ಇದನ್ನೆಲ್ಲ ತಿಂದೆ ಎಂದಾದರೆ ಅದರ ಮೇಲೆ ನಿನಗೆ ನಾನು ನೂರು ರೂಪಾಯಿ ಕೊಡುತ್ತೇನೆ, ತಿಂದು ತೋರಿಸು ನೋಡೋಣ" ಎಂದ.

ಇದು ಒಂದು ಸ್ಪರ್ಧೆಯಾಗಿ ರೂಪುಗೊಂಡಿತು. ಈ ಸ್ಪರ್ಧೆಯಲ್ಲಿ ಇನ್ನೊಂದು ಮಗ್ಗುಲು ಕೂಡ ಬೇಡವೇ? ಆತ ತಿನ್ನದೆ ಹೋದರೆ! ಆಗ ಆತ ನೂರು ರೂಪಾಯಿ ನೀಡಬೇಕು.

ಆತ ಮತ್ತು ಈತ ಇವರಿಬ್ಬರ ನಡುವೆ ಸ್ಪರ್ಧೆ ಆರಂಭವಾಯಿತು. ಅಲ್ಲಿ ಅಂಗಡಿಯವನು ಸೇರಿದಂತೆ, ಉಳಿದವರೆಲ್ಲ ಪ್ರೇಕ್ಷಕರಾದರು.

ಆತ ಹಣ್ಣು ತಿನ್ನಲು ಪ್ರಾರಂಭಿಸಿದ. ಬೇಕಾದಷ್ಟು ತಿಂದ. ಬಳಿಕ ತೆಪ್ಪಗೆ ಕುಳಿತ.

"ಏನಯ್ಯ? ಎಲ್ಲ ತಿಂದಿಲ್ಲ, ಸೋತೆಯಾ?" ಎಂದು ಈತ ಕೇಳಿದ.

"ಇಲ್ಲ, ಇಲ್ಲ, ಸೋತಿಲ್ಲ. ತಿನ್ನುವುದನ್ನು ನಾನು ತಿನ್ನುವವನಿದ್ದೇನೆ. ಈಗ ಇಷ್ಟು ಸಾಕು. ಯಾವಾಗ ತಿಂದು ಮುಗಿಸಬೇಕೆಂದು ಸ್ಪರ್ಧೆಯಲ್ಲಿ ಏನಾದರೂ ಹೇಳಿದೆಯಾ?" ಎಂದ ಆತ.

"ಓಹೋ! ಹಾಗೋ? ಇರಲಿ ನೋಡೋಣ." ಈತ ಒಪ್ಪಿಕೊಳ್ಳದೆ ಬೇರೆ ವಿಧಿ ಇರಲಿಲ್ಲ. ಹಾಗಾಗಿ ಎರಡು ದಿನಗಳಲ್ಲಿ ಗೊನೆಯ ಹಣ್ಣುಗಳೆಲ್ಲ ಖಾಲಿ.

ಆದರೆ ಸ್ಪರ್ಧೆಯಲ್ಲಿ ಆತ ಗೆಲುವು ಪಡೆಯಲಿಲ್ಲ. "ಇದನ್ನು ಎಲ್ಲ ತಿಂದು ಬಿಡಲೆ?" ಎಂದವನು ತಿಂದ ಹಣ್ಣುಗಳ ಸಿಪ್ಪೆ, ಹಣ್ಣು ಖಾಲಿಯಾದ ಗೊನೆಯನ್ನು, ಅದನ್ನು ನೇತು ಹಾಕಿದ ಹಗ್ಗವನ್ನು ಎಲ್ಲ ತಿನ್ನಬೇಡವೆ? ಇಲ್ಲೇ ಇರುವುದು ಸೋಲಿಸುವ ಉಪಾಯ. ಹಾಗಾಗಿ ಸ್ಪರ್ಧೆಯಲ್ಲಿ ಗೆದ್ದವರು ಯಾರು ನೀವೇ ತೀರ್ಮಾನಿಸಬೇಕು.

ಅತ್ತೆಯ ಮಾತು ಕೇಳುವಾಗ ನನ್ನ ಮಡಿಲಲ್ಲಿ ಉರಿ ಏಳುತ್ತದೆ

ಒಂದು ಬಾರಿ ಮನೆಯಲ್ಲಿ ಹಲಸಿನ ಕಡುಬು ಮಾಡಿ ಬೇಯಲು ಇಟ್ಟಿದ್ದರು. ಮನೆಯಲ್ಲಿ ಅತ್ತೆ ಇಲ್ಲದಿರುವುದನ್ನು ಗಮನಿಸಿದ ಸೊಸೆ ಬೇಯುತ್ತಿದ್ದ ಪಾತ್ರೆಯಿಂದಲೇ ಒಂದು ಹಲಸಿನ ಕಡುಬನ್ನು ಎತ್ತಿಕೊಂಡು ತಿನ್ನಲೆಂದು ಹೊರಗೆ ತಂದಳು. ಅಷ್ಟಾಗುವಾಗ ಹೊರಗಡೆ ಅತ್ತೆ ಮಾತನಾಡುವ ಸ್ವರ ಅವಳಿಗೆ ಕೇಳಿಬಂತು. ಸೊಸೆಗೆ ಏನೂ ಮಾಡಲು ತೋಚದೆ ಬಿಸಿ ಬಿಸಿ ಹಲಸಿನ ಕಡುಬನ್ನು ಸೆರಗಿನೊಳಗೆ ಬಚ್ಚಿಟ್ಟುಕೊಂಡಳು. ಸೊಸೆಯನ್ನು ಕಂಡವಳೇ ಅತ್ತೆ ಯಾವುದೋ ಕಾರಣಕ್ಕೆ ಬಯ್ಯುತ್ತಾ ಬಂದಳು.

ಆಗ "ಏನತ್ತೇ? ನಿಮ್ಮ ಮಾತು ಕೇಳುತ್ತಿದ್ದಾಗ ನನ್ನ ಉಡಿಯಲ್ಲಿ ಉರಿ ಏಳುತ್ತಿದೆ" ಎಂದಳಂತೆ ಸೊಸೆ. ಹೀಗೆ "ಅತ್ತೆಯ ಮಾತು ಕೇಳುತ್ತಿದ್ದರೆ ನನ್ನ ಮಡಿಲಲ್ಲಿ ಉರಿ ಏಳುತ್ತದೆ" ಎನ್ನುವ ಗಾದೆಯ ಮಾತೊಂದು ಹುಟ್ಟಿ ಜನಪ್ರಿಯವಾಯಿತಂತೆ. ಉಗುಳುವುದಕ್ಕೂ ಅಲ್ಲ, ನುಂಗುವುದಕ್ಕೂ ಅಲ್ಲ ಎಂಬ ಹೊತ್ತು ಅವಳಿಗಾಗಿತ್ತು. ಬಿಸಿ ಬಿಸಿ ಕಡುಬಿನ ಉರಿ ಆಕೆಯ ಮೈಯನ್ನು ಸುಡುತ್ತಿತ್ತು. ಏನೇ ಇರಲಿ, ಆಕೆಯ ಗುಟ್ಟು ರಟ್ಟಾಗಲಿಲ್ಲ. ಜೋರಿನವರ ಎಡೆಯಲ್ಲಿ ಬದುಕುವ ಉಪಾಯವಿದು.

ಅತ್ತೆಗೆ ಮರು ಬಡಿಸಲು ಬಂದ ಸೊಸೆ

ಒಂದು ಕಾಲದ ಅವಿಭಕ್ತ ಕುಟುಂಬದ ಮನೆಗಳಲ್ಲಿ ಅತ್ತೆ ಮತ್ತು ಸೊಸೆ ಎಂದರೆ ಒಬ್ಬಳನ್ನು ಕಂಡರೆ ಇನ್ನೊಬ್ಬಳಿಗಾಗದು. ಎಣ್ಣೆ ಶೀಗೆಯ ಹಾಗೆ ಎದುರಿಗೆ ಇಬ್ಬರೂ ಜೋರಾಗಿ ವರ್ತಿಸುತ್ತಾರೆ. ಅದರೆ ಒಳಗಿಂದೊಳಗೆ ಅತ್ತೆ, ಸೊಸೆಗೆ ಹೆದರುತ್ತಾಳೆ; ಸೊಸೆ, ಅತ್ತೆಗೆ ಹೆದರುತ್ತಾಳೆ. ಹಾಗಾಗಿ ಕದ್ದು ತಿನ್ನುವಾಗ ಇಬ್ಬರೂ ಸಿಕ್ಕಿ ಬೀಳುತ್ತಾರೆ, ಅದೇ ತಮಾಷೆ.

ಅಕ್ಕಿ, ಬತ್ತ, ಧಾನ್ಯ ಎಲ್ಲವೂ ಮಿತಿಯಲ್ಲಿದ್ದ ಕಾಲವದು. ಅಡುಗೆ ಪದಾರ್ಥ ಎಲ್ಲ ಮಾಡಿ ಇಟ್ಟಿದ್ದಾರೆ. ಸೊಸೆ ಮನೆಯಲ್ಲಿ ಇಲ್ಲವೆಂದು ತಿಳಿದ ಅತ್ತೆ ಮಾಡಿಟ್ಟ ಅಡುಗೆಯಿಂದ ತುಸು ಬಡಿಸಿಕೊಂಡು ಒಂದು ಕೋಣೆಗೆ ತೆರಳಿ ಉಣ್ಣುತ್ತಿದ್ದಳು. ಅಷ್ಟರಲ್ಲಿ ಎಲ್ಲೋ ಹೋಗಿದ್ದ ಸೊಸೆ ಕೂಡ ಬಂದಳು. ಮನೆಯಲ್ಲಿ ಅತ್ತೆ ಇಲ್ಲವಲ್ಲ ಎಂದುಕೊಂಡು ತಾನೂ ತುಸು ಬಡಿಸಿಕೊಂಡು ಅದೇ ಕೋಣೆಗೆ ಹೋಗಬೇಕೆ!

ತನ್ನ ಇದಿರಿಗೆ ಬಂದ ಸೊಸೆಯನ್ನು ಒಮ್ಮೆಲೇ ಕಂಡ ಅತ್ತೆಗೆ ಏನು ಮಾಡಬೇಕು ಎಂದು ತೋಚಲಿಲ್ಲ.

"ಏನೇ, ಏನು ಬೇಕು?" ಎಂದು ಆಕೆ ಕೇಳಿದಾಗ

"ಏನಿಲ್ಲ ಅತ್ತೆ, ನಿಮಗೆ ಮರು ಬಡಿಸಲು ತಂದಿದ್ದೇನೆ ನೋಡಿ!" ಎಂದು ತುಸು ಧೈರ್ಯದಿಂದಲೇ ಹೇಳಿದಳಂತೆ. ಸೊಸೆ ಮಾತ್ರ ಇಲ್ಲಿ ಒಳ್ಳೆಯವಳಂತೆ ಕಾಣಬಹುದು. ಆದರೆ ಇಬ್ಬರೂ ಕಳ್ಳರು ಕಳ್ಳರೇ ಎನ್ನುವುದನ್ನು ಈ ಘಟನೆ ಸೂಚಿಸುತ್ತದೆ.

ನಾನು ಈ ಮನೆಯ ಒಡತಿ ಗೊತ್ತಾಯಿತೆ?

ಯಾವುದೇ ಮನೆಯಾದರೂ ಅಲ್ಲಿ ಅತ್ತೆಯದೇ ಕಾರುಬಾರು. ಅತ್ತೆಯಲ್ಲಿ ಕೇಳದೆ ಸೊಸೆ ಏನೂ ಮಾಡುವಂತಿಲ್ಲ. ಒಂದು ಹೆಜ್ಜೆಯೂ ಮುಂದೆ ಇಡುವಂತಿಲ್ಲ. ಅತ್ತೆ ಇಲ್ಲದ ಸಂದರ್ಭದಲ್ಲಿ ಸೊಸೆಯ ಕೆಲಸಗಳೂ ತುಂಬಾ ಎಚ್ಚರದವುಗಳಾಗಿರಬೇಕು. ಕಾರಣ ಆಕೆ ಬಂದ ಮೇಲೆ ವಿಚಾರಣೆ ನಡೆಯುತ್ತದೆ.

ಒಂದು ಬಾರಿ ಅತ್ತೆ ಮನೆಯಲ್ಲಿರಲಿಲ್ಲ, ಸೊಸೆಯಿದ್ದಳು. ಓರ್ವ ಭಿಕ್ಷುಕ ಮನೆ ಬಾಗಿಲಿಗೆ ಭಿಕ್ಷೆ ಕೇಳಿಕೊಂಡು ಬಂದಿದ್ದ. ಅತ್ತೆಯಲ್ಲಿ ಕೇಳದೆ ಏನೂ ಯಾರಿಗೂ ಕೊಡುವಂತಿರಲಿಲ್ಲ. ಹಾಗಾಗಿ ಸೊಸೆ, "ಈ ಮನೆಯಲ್ಲಿ ಭಿಕ್ಷುಕನಿಗೆ ಕೊಡಲು ಏನೂ ಇಲ್ಲ" ಎಂದು ಹಿಂದೆ ಕಳುಹಿಸಿಕೊಟ್ಟಳು.

ಅಷ್ಟರಲ್ಲಿ ಅದೇ ದಾರಿಯಾಗಿ ಅತ್ತೆ ನಡೆದುಕೊಂಡು ಬಂದಳು. ಬರುವಾಗ ಇದಿರಿಗೆ ಬರುವ ಭಿಕ್ಷುಕನನ್ನು ಕಂಡಳು. ಭಿಕ್ಷುಕನನ್ನು ನಿಲ್ಲಿಸಿ ತನ್ನ ಮನೆಗೆ ಕೈತೋರಿಸಿ, "ಆ ಮನೆಯಲ್ಲಿ ನಿನಗೆ ಏನು ಸಿಕ್ಕಿತು?" ಎಂದು ಕೇಳಿದಳು.

ಆಗ ಭಿಕ್ಷುಕ "ಈ ಮನೆಯಲ್ಲಿ ನಿನಗೆ ಕೊಡಲು ಏನೂ ಇಲ್ಲ ಎಂದು ಅಲ್ಲಿದ್ದವಳು ವಾಪಾಸು ಕಳುಹಿಸಿದಳು" ಎಂದ. ಇದನ್ನು ಕೇಳಿದ ಕೂಡಲೇ, "ಹೌದಾ! ಹಾಗೆ ಅಂದಳೇ! ವಿಚಾರಿಸುತ್ತೇನೆ ನಾನು" ಎಂದು ಆತನನ್ನು ತಿರುಗಿ ಬರಲು ತಿಳಿಸಿದಳು.

"ಏನಾದರೂ ಸಿಕ್ಕಿಯೇ ಸಿಗಬಹುದು" ಎನ್ನುವ ಆಸೆಯಿಂದ ಆತ ಆಕೆಯ ಬೆನ್ನ ಹಿಂದೆಯೇ ಬಂದ. ಆತನನ್ನು ಹೊರಗೆ ನಿಲ್ಲಿಸಿ, ತಾನು ಮನೆಯೊಳಗೆ ಪ್ರವೇಶಿಸುವ ಹೊತ್ತು ಅಲ್ಲೇ ನಿಂತಿದ್ದ ಸೊಸೆಯನ್ನು ನೋಡಿ, "ಹೌದೇನೇ! ಎಷ್ಟೇ ನಿನ್ನ ಕಾರುಬಾರು! ನಾನು ಈ ಮನೆಯ ಒಡತಿ ಎನ್ನುವುದು ನಿನಗೆ ಗೊತ್ತಿಲ್ವೇನೇ?" ಹೀಗೆ ಗರ್ಜಿಸಿ, ಭಿಕ್ಷುಕನನ್ನು ನೋಡಿ, "ನಾನು ಈಕೆಯ ಅತ್ತೆ; ಈ ಮನೆಯ ಒಡತಿ ಗೊತ್ತಾಯಿತೆ? ಇಲ್ಲಿ ನಿನಗೆ ಕೊಡಲು ಏನೂ ಇಲ್ಲ, ಆಚೆ ಹೋಗು" ಎಂದು ಜೋರಾಗಿ ಹೇಳಿದಳು. ಸೊಸೆಯನ್ನು ವಿಚಾರಿಸಿ, ಏನಾದರೂ ತನಗೆ ನೀಡಿಯಾಳು ಎಂದು ಕಾದು ನಿಂತಿದ್ದ ಭಿಕ್ಷುಕ ಪಾಪ ಬಂದ ಹಾಗೆ ತಲೆಗೆ ಕೈ ಇಟ್ಟುಕೊಂಡು ಹಿಂದಿರುಗಿದ.

ಕಬ್ಬು ಕದ್ದುದು ಜಾರು ನೋಡಿ

ಅಲ್ಲಿ ಬೆಟ್ಟು ಗದ್ದೆಯಲ್ಲಿ ಬಯಲಾಟ ಆರಂಭವಾಗಿದೆ. ಊರ ಜನರೆಲ್ಲ ಬಯಲಾಟಕ್ಕೆ ಬಂದಿದ್ದಾರೆ. ಗಂಡಸರು, ಹೆಂಗಸರು, ಮುದುಕರು, ಯುವಕರು, ಮಕ್ಕಳು ಬಯಲಾಟ ನೋಡುತ್ತಿದ್ದಾರೆ. ನಡುರಾತ್ರಿ ಕಳೆದಿರಬಹುದು. ನಮ್ಮ ಜಾರು ಕೂಡಾ ಬಂದಿದ್ದಾನೆ. ಬಗೆಬಗೆಯ ವೇಷಗಳು, ಹಾಸ್ಯಗಳು ಬಹು ಮೋಜು. ಬಂದ ವೇಷಗಳೆಲ್ಲ ಕುಣಿಕುಣಿದು ಭಾಗವತರ ಪದ್ಯಕ್ಕೆ ಅರ್ಥ ಹೇಳಿ ರಂಗಸ್ಥಳದಿಂದ ಹೋಗುತ್ತಿವೆ. ಭಾಗವತರ ಹಾಡೂ ರಂಜಿಸುತ್ತಿದೆ.

ಆದರೆ ಭಾಗವತರ ಒಂದು ಹಾಡು ಕೇಳಿ ಜಾರುವಿಗೆ ಅಡಿ ತಪ್ಪಿ ಹೋಯಿತು. ರಂಗಸ್ಥಳದಲ್ಲಿ ಹಾಡು ಹೇಳಿ ಕುಣಿಸುತ್ತಿದ್ದ ಸ್ತ್ರೀ ವೇಷವನ್ನು ಕಣ್ಣು ಬಾಯಿ ಬಿಟ್ಟು ಎಲ್ಲರೂ ನೋಡುವುದರಲ್ಲೇ ಮಗ್ನರಾಗಿದ್ದಾರೆ. "ಕಂಬು ಕಂಠಿನಿ ಚಾರುಶೀಲೆ" ಎಂದು ರಾಗ ಎಳೆಯುತ್ತಿದ್ದುದನ್ನು ಕಿವಿ ನಿಮಿರಿಸಿ ಕೇಳುತ್ತಿದ್ದ ಜಾರುವಿಗೆ ಒಮ್ಮೆಲೇ ಸಿಡಿಲು ಬಡಿದಂತಾಯಿತು. ಆತನಿಗೆ "ಕಂರ್ಬು ಕಂಡಿನಿ ಜಾರು ತೂಲೆ" (ಕಬ್ಬು ಕದ್ದವ ಜಾರು ನೋಡಿ) ಎಂಬುದಾಗಿ ಕೇಳಿ ಬಂತು.

"ಎಲಾ ಕತೆಯೇ ಈ ಭಾಗವತರಿಗೆ ನಾನು ಕಬ್ಬು ಕದ್ದ ಸಂಗತಿ ಹೇಗೆ ತಿಳಿಯಿತು? ಹೌದು, ಮತ್ತೂ ಹಾಗೆಯೇ ಹೇಳುತ್ತಿರುವರಲ್ಲಾ? ನನ್ನ ಮುಖವನ್ನೇ ದಿಟ್ಟಿಸಿ ಮತ್ತು ಮತ್ತೂ ಅದೇ ಸೊಲ್ಲು! ಹೌದು! ನಾನು ಸ್ವಲ್ಪ ಆಗತಾನೇ ಮಜಲು ಬೆಟ್ಟಿನ ಭಟ್ಟರ ತೋಟದಿಂದ ಒಂದು ಹೊರೆ ಕಬ್ಬು ಕಡಿದು ಅಡಗಿಸಿಟ್ಟದ್ದು ಹೌದು. ಆದರೆ ಈ ಭಾಗವತರಿಗೆ ಅದು ಗೊತ್ತಾದದ್ದು ಹೇಗೆ? ಇವರನ್ನು ನಂಬುವುದು ಕಷ್ಟ". "ಜಾರು ಇಲ್ಲೇ ಇದ್ದಾನೆ ನೋಡಿ ಈ ಕಡೆ" ಎಂದು ಎಲ್ಲಾದರೂ ನನ್ನ ಕಡೆಗೆ ಬೆಟ್ಟು ಮಾಡಿ ತೋರಿಸಿದರೆ ಕತೆ ಕೆಟ್ಟಂತೆ! ಏನು ಮಾಡುವುದು ಈಗ? ಭಾಗವತರು ನನ್ನನ್ನೇ ನೋಡುತ್ತಲೂ ಇದ್ದಾರೆ" ಎಂದುಕೊಂಡ ಜಾರು ಮೆಲ್ಲ ಮೆಲ್ಲನೆ ಆ ಕಡೆ ಈ ಕಡೆ ನೋಡುತ್ತಾ ಅಲ್ಲಿಂದ ಜಾರಲು ನೋಡಿದ. ಆಗಲೂ "ಕಂಬು ಕಂಠಿನಿ ಚಾರು ಶೀಲೆ (ಕಂರ್ಬು ಕಂಡಿನಿ ಜಾರು ತೂಲೆ...) ಎನ್ನುವ ಭಾಗವತರ ಹಾಡು ನಿಂತಿರಲಿಲ್ಲ. ಎಲ್ಲರೂ ಆಟ ನೋಡುವುದರಲ್ಲಿಯೇ ಮೈಮರೆತಿದ್ದರೆ ಜಾರು ಮಾತ್ರ ಅಲ್ಲಿಂದ ಹಿಂದಕ್ಕೂ ನೋಡದೆ ಕಾಲು ಕಿತ್ತವನಾಗಿದ್ದಾನೆ.

ಭಟ್ಟರ ಮೇಲೆ ಕೋಪ! ಜಳಕಕ್ಕೆ ನೀರಿಲ್ಲ!

ಈಚೆ ಮನೆ ಭಟ್ಟರದು. ಆಚೆ ಮನೆ ಗುತ್ತಿನವರದು. ಒಮ್ಮೆ ಅವರಿಬ್ಬರಿಗೂ ಯಾವುದೋ ವಿಷಯದಲ್ಲಿ ತಾಗಿ ಬಂತು. ಭಟ್ಟರಿಗೆ ದೇವರು ಹೊರುವ ಕೆಲಸ. "ಒಂದು ಬಾರಿ ಭಟ್ಟರಿಗೆ ತಕ್ಕ ಬುದ್ಧಿ ಕಲಿಸಬೇಕು" ಎಂದು ಗುತ್ತಿನವ ಕಾಯುತ್ತಿದ್ದ.

ಊರಿನ ಜಾತ್ರೆ ಬಂತು. ಉತ್ಸವ ಕಳೆದು ದೇವರು ಜಳಕಕ್ಕೆ ಹೊರಟರು. ಜಳಕದ ಕೆರೆಯಿರುವುದು ಗುತ್ತಿನವರ ಜಾಗದಲ್ಲಿ. "ಭಟ್ಟ ಹೇಗೆ ದೇವರನ್ನು ಜಳಕಕ್ಕೆ ಇಳಿಸುತ್ತಾನೆ ನೋಡಬೇಕು" ಎಂದು ಗುತ್ತಿನವ ಹಿಂದಿನ ದಿನವೇ ಏತದಿಂದ
ಕೆರೆಯ ನೀರನ್ನು ಕಾಲಿ ಮಾಡಿಟ್ಟ. ಜಳಕಕ್ಕೆ ಇಳಿದ ದೇವರಿಗೆ ನೀರಿಲ್ಲವಾಯಿತು. ಭಟ್ಟರ ಮೇಲಿನ ಕೋಪವನ್ನು ದೇವರಲ್ಲಿ ತೋರಿಸಿದ ಗುತ್ತಿನವ.

"ಯಾರ ಕೋಪವನ್ನು ಯಾರಲ್ಲಿ ತೀರಿಸುವುದು?" ಜಳಕಕ್ಕೆ ಇಳಿದ ದೇವರು ಮುನಿದು ನೀರು ಬತ್ತಿಸಿದ ಗುತ್ತಿನವನ ಸಂತಾನಕ್ಕೆ ಶಾಪವಿತ್ತರು.

ಅಪ್ಪ ಎಲ್ಲೂ ಇಲ್ಲ, ಕೋಳಿ ಗೂಡಲ್ಲೂ ಇಲ್ಲ!

ಒಬ್ಬ ಕಳ್ಳನನ್ನು ಪೋಲೀಸಿನವರು ಅಟ್ಟಿಸಿಕೊಂಡು ಬಂದರು. ಕಳ್ಳ ಓಡಿದ. ಅಟ್ಟಿಸಿಕೊಂಡು ಹೋದವರು ಆತನ ಬೆನ್ನಟ್ಟಿದರು. ಕಳ್ಳ ತಪ್ಪಿಸಿಕೊಂಡು ಹೇಗೂ ತನ್ನ ಮನೆ ಸೇರಿದ. ಆದರೆ ಪೋಲೀಸಿನವರು ಆತನ ಮನೆ ಪತ್ತೆ ಹಚ್ಚಿ ಅಲ್ಲಿಗೆ ಬಂದರು.

ಕಳ್ಳನಿಗೆ ಏನೂ ಮಾಡುವುದಕ್ಕಾಗಲಿಲ್ಲ. "ಇನ್ನು ಏನು ಮಾಡಲಿ? ಪೋಲೀಸಿನವರ ಕೈಗೆ ಸಿಕ್ಕಿ ಬಿದ್ದಂತೆ ಆಯಿತು" ಎಂದುಕೊಂಡ ಕಳ್ಳ ಕೂಡಲೇ ಒಂದು ಉಪಾಯ ಹುಡುಕಿಕೊಂಡ. ಕಳ್ಳ ತನ್ನ ಮಗನನ್ನು ಕರೆದು "ನೋಡು ಮಗಾ, ಯಾರಾದರೂ ನನ್ನನ್ನು ಕೇಳಿಕೊಂಡು ಬಂದರೆ ಅಪ್ಪ ಮನೆಯಲ್ಲೆಲ್ಲೂ ಇಲ್ಲ ಎಂದು ಹೇಳಿಬಿಡು" ಎಂದು ಹೇಳಿ ಅಲ್ಲಿಯೇ ಅಂಗಳದಲ್ಲಿದ್ದ ಕೋಳಿ ಗೂಡಿನೊಳಗೆ ಅವಿತುಕೊಂಡ.

ಅಷ್ಟರಲ್ಲಿ ಪೋಲೀಸು ಪಡೆ ಅಂಗಳಕ್ಕೆ ಬಂದು ಮುಟ್ಟಿತು. ಅಂಗಳದಲ್ಲಿದ್ದ ಹುಡುಗನನ್ನು ಆತನ ಮಗನೆಂದು ತಿಳಿದು "ನಿನ್ನ ಅಪ್ಪ ಎಲ್ಲಿದ್ದಾನೆ ಬೇಗ ಹೇಳು" ಎಂದು ಗದರಿಸಿ ಕೇಳಿದರು. ಹುಡುಗ ಒಮ್ಮೆಲೆ ಹೆದರಿಕೊಂಡು ಏನು ಹೇಳಬೇಕೆಂದು ತಿಳಿಯದೆ "ಅ.... ಪ್ಪ.... ಎಲ್ಲೂ ಇ.... ಲ್ಲ...., ಕೋಳಿ ಗೂಡಿನಲ್ಲೂ ಇ....ಲ್ಲ!" ಎಂಬುದಾಗಿ ಹೇಳಿಬಿಟ್ಟ. ಇದರಿಂದ ಹುಡುಕುವವರಿಗೆ ದಾರಿ ತೋರಿಸಿದ ಹಾಗಾಯಿತು. ಕಳ್ಳ ಕೈಗೆ ಸಿಕ್ಕಿದ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ನೆಂಟನನ್ನು ಕಟ್ಟು! ದೊಣ್ಣೆಯನ್ನು ಹುಡುಕು!

ಮೇಯಲೆಂದು ಬಿಟ್ಟ ಎತ್ತು ಕೋಣಗಳು ಹೊಟ್ಟೆ ತುಂಬುವಷ್ಟು ಮೇದರೂ ಗುಡ್ಡದಿಂದ ಕೆಳಗಿಳಿಯವು. ಕತ್ತಲೆಯಾದರೂ ಹಟ್ಟಿ ಕಾಣವು. ಮರುದಿನ ಬೆಳಗ್ಗೆ ಗದ್ದೆ ಉಳುವುದಕ್ಕಿದೆಯೆಂದು ತಿಳಿದರೆ ಎಲ್ಲೋ ಕಣ್ಣು ತಪ್ಪಿಸುವ ಎತ್ತು ಕೋಣಗಳೂ ಇರುತ್ತವೆ. ಒಂದು ಜತೆ ಹಾಗೆ ಒಂದು ಕಡೆ ಇದ್ದೀತು. ಸಾಯಂಕಾಲ ಉಳುವವ ಅವನ್ನು ಹುಡುಕಿ ಹಟ್ಟಿ ಸೇರಿಸಬೇಕಾದೀತು. ಇಲ್ಲವಾದಲ್ಲಿ ಮರುದಿನ ಗದ್ದೆಯಲ್ಲಿ ಎತ್ತುಗಳನ್ನು ಹೂಡುವುದೆಂತು?

ಒಬ್ಬಾತ ರೈತನಿಗೆ ಒಂದು ಜೊತೆ ಎತ್ತುಗಳಿದ್ದವು. ಅವುಗಳಲ್ಲಿ ಒಂದರ ಹೆಸರು 'ನೆಂಟ' ಇನ್ನೊಂದರದು 'ದೊಣ್ಣೆ'. ಒಮ್ಮೆ ರೈತನ ಮನೆಗೆ ಸಂಜೆಯ ಹೊತ್ತು ಓರ್ವ 'ನೆಂಟ' ಬಂದವನು ಜಗಲಿಯಲ್ಲಿ ಕುಳಿತಿದ್ದನು. ತನ್ನ ಹೊಲದಿಂದ ಕೆಲಸ ಮುಗಿಸಿ ಮನೆಗೆ ಬರುತ್ತಿರುವ ರೈತ ಮೇಯಲು ಹೋಗಿದ್ದ ನೆಂಟ ಬರುತ್ತಿರುವುದನ್ನು ನೋಡಿ ಮನೆಯವರನ್ನು ಕರೆದು ಹೀಗೆ ಹೇಳಿದ: "ನೋಡಿ ನೆಂಟ ಬಂದ. ನೆಂಟನನ್ನು ಕಟ್ಟಿ ಹಾಕಿ, ದೊಣ್ಣೆಯನ್ನು ಹುಡುಕಿ!"

ಇಷ್ಟರಲ್ಲಿ ಜಗಲಿಯಲ್ಲಿ ಕುಳಿತಿದ್ದ ನೆಂಟನಿಗೆ "ಆಯಿತು, ಇಲ್ಲಿ ಹೆಚ್ಚು ಹೊತ್ತು ಕುಳಿತರೆ ಕೆಡುಗಾಲ ಕಂಡಿತು". ಹೀಗೆ ಯೋಚಿಸಿ ಜಗಲಿಯಿಂದ ನೆಂಟ ಅಂಗಳಕ್ಕಿಳಿದು ಅಲ್ಲಿಂದ ಒಂದೇ ಸಮನೆ ಓಡತೊಡಗಿದ. ನೆಂಟ ಓಡುವುದನ್ನು ನೋಡಿದ ಮನೆಯವರೆಲ್ಲ ಅಚ್ಚರಿಗೊಂಡು "ಆತ ಓಡುವುದೇತಕ್ಕೆ?" ಎಂದು ಆತನ ಹಿಂದೆಯೇ ಓಡತೊಡಗಿದರು. ಆದರೆ ಆತ ತಿಳಿದುಕೊಂಡದ್ದೇ ಬೇರೆ. ತನ್ನನ್ನು ಹೊಡೆದು ಕೊಲ್ಲಲು ಸಂಚು ನಡೆಸುತ್ತಿದ್ದಾರೆ ಎಂದುಕೊಂಡು ಮತ್ತೂ ಜೋರಾಗಿ ಓಡಿದ. ಅಲ್ಲದೆ ಬೆನ್ನಟ್ಟುವವನ ಹೆಗಲಲ್ಲಿ ಹಾರೆಯೂ ಇರುವುದನ್ನು ಆತ ಕಂಡಿದ್ದಾನೆ. ಹೇಗಾದರೂ ಅಡ್ಡಗಟ್ಟಿ ಆತನನ್ನು ನಿಲ್ಲಿಸಿಬಿಟ್ಟರು. ನೆಂಟನ ಉಸಿರು ಮೇಲೆ ಕೆಳಗಾಯಿತು. ಹೇಗೂ ಆತನ ಬಾಯಿ ಬಿಡಿಸಿದರು. 'ನೆಂಟ' ಮತ್ತು 'ದೊಣ್ಣೆ' ಎಂಬ ಎತ್ತುಗಳಿಂದ ಈ ಅಚಾತುರ್ಯವಾಯಿತು. ಹಾಗಾಗಿ ಬಂದ ನೆಂಟನನ್ನು ಸಮಾಧಾನ ಮಾಡಬೇಕಾದರೆ ಮನೆಯವನಿಗೆ ಕುತ್ತಿಗೆಗೆ ಬಂತು.



ಮದುವೆ ಮನೆಯಲ್ಲಿ ಅಳಿಯನ ಉಭಯ ಸಂಕಟ!

ತಿಮ್ಮಪ್ಪ ಹೆಗ್ಗಡೆ ಎನ್ನುವವರು ಕೊಡಿಯಾಲ ಗುತ್ತಿನಲ್ಲಿ ಗಣ್ಯರೆನಿಸಿಕೊಂಡ ಕಾಲವೊಂದಿತ್ತು. ಅವರ ಮುಂದೆ ಯಾರೂ ತಪ್ಪಿ ನಡೆಯುತ್ತಿರಲಿಲ್ಲ. ಅಂತಹವರನ್ನು ಅವರು ಬಿಡುತ್ತಲೂ ಇರಲಿಲ್ಲ. ತನ್ನ ಗುತ್ತಿನ ಬಾಕಿಮಾರು ಗದ್ದೆಯಲ್ಲಿ ಆಗಾಗ ಬಯಲಾಟ ಆಡಿಸುವ ಹುಚ್ಚು ಹೆಗ್ಗಡೆಗಿತ್ತು. ಆಟದ ದಿನ ಸಂಜೆಯ ಹೊತ್ತಿಗೆ ರಂಗಸ್ಥಳ ಅಚ್ಚುಕಟ್ಟಾಗಿ ಸಿದ್ಧವಾಗುತ್ತಿತ್ತು. ಮೇಳದವರಿಗೂ ತನ್ನ ಗುತ್ತಿನಲ್ಲೇ ಊಟ, ವಸತಿ ವ್ಯವಸ್ಥೆಯಾಗುತ್ತಿತ್ತು.

ಇತರರ ಆಟದ ರಂಗಸ್ಥಳಕ್ಕೂ ಹೆಗ್ಗಡೆಯವರ ಆಟದ ರಂಗಸ್ಥಳಕ್ಕೂ ಸ್ವಲ್ಪ ವ್ಯತ್ಯಾಸವಿತ್ತು. ನಾಲ್ಕು ಕಂಬಗಳಿಗೆ ನಾಲ್ಕು ಚಾಟಿಗಳನ್ನು ಕಟ್ಟಿಸುತ್ತಿದ್ದುದೇ ಈ ವ್ಯತ್ಯಾಸ. ಈ ಚಾಟಿಗಳನ್ನು ಯಾಕೆ ಕಟ್ಟಲಾಗುತ್ತಿತ್ತು ಎನ್ನುವುದು ಆಟ ನೋಡಲು ಬರುತ್ತಿದ್ದವರಿಗೆಲ್ಲರಿಗೂ ತಿಳಿದಿದ್ದ ಸಂಗತಿ. ಆಟಕ್ಕೆಂದು ಬಂದು ಗಲಾಟೆ ನಡೆಸುವವರಿಗೆ ಈ ಚಾಟಿಗಳು ಉಪಯೋಗವಾಗುತ್ತಿದ್ದವು ಎಂದು ಬೇರೆ ಹೇಳಬೇಕಾಗಿಲ್ಲ.

ಇವರಿಗೆ ಆಟ ಕುಣಿಯುವವರ ಮೇಲೂ ಕಣ್ಣು. ಎಲ್ಲಾದರೂ ಅವರು ಹೆಜ್ಜೆ ತಪ್ಪಿದರೆ, ತಾಳ ತಪ್ಪಿಸಿದರೆ ಅಲ್ಲೇ ಬಂದು ಎಲ್ಲರೆದುರಿಗೂ ಬಯ್ಯದೆ ಉಳಿಯುತ್ತಿರಲಿಲ್ಲ. ಆಟಕ್ಕೆ ಬಂದವರಲ್ಲೂ ಹಾಗೆಯೇ ಏನಾದರೂ ಹೆಚ್ಚು ಕಡಿಮೆಯೆಂದು ಕಂಡು ಬಂದರೆ ನಿರ್ದಾಕ್ಷಿಣ್ಯವಾಗಿ ವರ್ತಿಸುತ್ತಿದ್ದರವರು. ಹಾಗಾಗಿ ಆಸಕ್ತರು ಈ ಆಟಗಳನ್ನು ಎಂದೂ ನೋಡದೆ ಬಿಡುತ್ತಿರಲಿಲ್ಲ. ಅದಕ್ಕೆ ಮುಖ್ಯ ಕಾರಣವೆಂದರೆ ಹೆಗ್ಗಡೆಯವರ ಪಾರುಪತ್ಯದಲ್ಲಿ ಅವರೆಲ್ಲ ಗಲಾಟೆಯಿಲ್ಲದೆ ನೆಮ್ಮದಿಯಿಂದ ಆಟ ನೋಡಬಹುದಾಗಿತ್ತು.

ತನ್ನ ಜಾತಿಗಿಂತ ಕೆಳಗಿನವನಾಗಿದ್ದರೂ ಪಾಂಡು ಎನ್ನುವವನನ್ನು ಹೆಗ್ಗಡೆ ತನ್ನ ಕೂಟದಲ್ಲಿ ಸೇರಿಸಿಕೊಳ್ಳುತ್ತಿದ್ದರು. ತನ್ನ ನೇರ ವ್ಯಕ್ತಿತ್ವ, ಧೈರ್ಯ, ಸಾಹಸಗಳಿಂದಾಗಿ ಪಾಂಡು ಹೆಗ್ಗಡೆಯ ಬಂಟನಂತೆ ಇರುತ್ತಿದ್ದು ಹೆಗ್ಗಡೆಯ ಗೌರವಕ್ಕೂ ಪಾತ್ರನಾಗುತ್ತಿದ್ದ. ಹಾಗಾಗಿ ಬಯಲಾಟ ಮೊದಲಾದ ಸಂದರ್ಭಗಳಲ್ಲಿ ಪಾಂಡುವಿಗಾಗಿ ಒಂದು ಆಸನ ಯಾವತ್ತೂ ಕಾದಿರುತ್ತಿತ್ತು. ಪಾಂಡುವಿನ ಗೈರುಹಾಜರಿಯಲ್ಲಿ ಆತನ ಮಗ ಬೊಮ್ಮಯನಿಗೆ ಈ ಸ್ಥಾನ ಸಿಗುತ್ತಿತ್ತು.

ಒಮ್ಮೆ ತಿಮ್ಮಪ್ಪ ಹೆಗ್ಗಡೆಯ ಮನೆಯಲ್ಲಿ ನಡೆದ ಮದುವೆಗೆ ಪಾಂಡು ಹೋಗಲಾಗಲಿಲ್ಲ. ಹಾಗಾಗಿ ಬೊಮ್ಮಯನನ್ನು ಕಳುಹಿಸಿದ. ಹೆಗ್ಗಡೆ ಬೊಮ್ಮಯನನ್ನು ದೂರದಿಂದಲೇ ಗಮನಿಸಿ ಕರೆದು ತನ್ನ ಜಾತಿಯವರ ಕೂಟದ ಕಳದಲ್ಲೇ ಆಸನ ನೀಡಿ ಕುಳ್ಳಿರಿಸಿದರು. ಈತನ ಪರಿಚಯ ಅನೇಕರಿಗಿರಲಿಲ್ಲ. ಬೊಮ್ಮಯನಿಗೂ ತುಸು ಮುಜುಗರ. “ಇದು ಯಾರು?” ಎಂಬುದಾಗಿ ನೆರೆದಿದ್ದ ಸಂಬಂಧಿಕರಲ್ಲಿ ಒಬ್ಬರು ಕೇಳಿಯೇ ಬಿಟ್ಟರು. ಒಡನೆಯೇ ಹೆಗ್ಗಡೆ “ಇವನು ನನ್ನ ಸೋದರಳಿಯ” (ಉಂದು ಎನ್ನ ಅರ್ವತೆ) ಎಂದರಂತೆ. ಆದರೆ ಈ ಅಳಿಯನಿಗೋ ಉಭಯ ಸಂಕಟ. ಎಲ್ಲಿ ಯಾರಾದರೂ ತನ್ನಲ್ಲೇ ಕೇಳಿಬಿಡುತ್ತಾರೋ ಎಂದು. ಅಷ್ಟರಲ್ಲಿ ಪುಣ್ಯಕ್ಕೆ ಊಟಕ್ಕೆ ಎಲ್ಲರೂ ಏಳಬೇಕಾಯಿತು. ಊಟದ ಪಂಕ್ತಿಯಲ್ಲೂ ಅಳಿಯ ಬೊಮ್ಮಯ ತಲೆ ಎತ್ತುವ ಧೈರ್ಯ ತೋರಲಿಲ್ಲ. ಸಧ್ಯ ಯಾರೂ “ನೀನು ಯಾರ ಮಗ?” (ಈ ಏರೆ ಮಗೆ?) ಎಂದೆಲ್ಲ ಕೇಳುವ ಗೊಡವೆಗೆ ಹೋಗದ್ದು ಅದೃಷ್ಟ. ಹಾಗಾಗಿ ಊಟವಾದ ಕೂಡಲೇ ಯಾರಿಗೂ ಮುಖ ತೋರಿಸದೆ ಈ ಅಳಿಯ ಬಂದೇ ಬಿಟ್ಟ.

ಇಲ್ಲಿಂದ ಮೇಲೆಯೂ ನನ್ನದೇ, ಕೆಳಗೂ ನನ್ನದೇ!

"ಅಣ್ಣನಿಗೊಂದು ಹೆಣ್ಣಾಗಬೇಕು. ಹೆಣ್ಣಿಗೊಂದು ಗಂಡು ಆಗಬೇಕು" ಒಂದು ಗಾದೆ ಮಾತು. ಹೆಣ್ಣಿಗೊಂದು ಗಂಡು ಆದರೆ ಆಯಿತು ಎನ್ನುವ ಹೊತ್ತಿಗೇ ಗಂಡ ಹೇಗಿರಬೇಕು? ಗಂಡಿಗೆ ಏನೆಲ್ಲಾ ಇರಬೇಕು ಎಂಬುದನ್ನು ಹೆಣ್ಣ ತವರು ಬಯಸದೆ ಉಳಿಯದು.

ಒಮ್ಮೆ ಒಂದು ಮನೆಗೆ ಹೆಣ್ಣು ನೋಡಲು ಒಂದು ಕಡೆಯಿಂದ ಬಂದರು. ಹೆಣ್ಣು ಆಗಬಹುದೆಂದಾಯಿತು. ಗಂಡನ್ನು ನೋಡಿದ್ದರೂ ಗಂಡಿನ ಕಡೆಯನ್ನು ನೋಡಬೇಡವೇ? ಹಾಗಾಗಿ ಹೆಣ್ಣಿನ ತಂದೆ, ಮಾವ ಗಂಡಿನ ಮನೆಗೆ ಹೋದರು. ಅಲ್ಲಿ ಬಂದ ನೆಂಟರನ್ನು ಸ್ವಾಗತಿಸಿ, ಕೈಕಾಲು ತೊಳೆಯಲು ನೀರಿತ್ತು ಕುಳಿತುಕೊಳ್ಳಲು ಹಸೆ ಹಾಕಿದರು. 'ಬೆಲ್ಲ ನೀರು' ಸತ್ಕಾರ ಆಯಿತು.

ಹುಡುಗನ ಮನೆ ಮಾತ್ರ ನೋಡಿದರೆ ಸಾಕೇ? ಹುಡುಗನಿಗೆ ಬೇರೆ ಆಸ್ತಿಪಾಸ್ತಿ ಏನೆಲ್ಲ ಇದೆ? ದೊಡ್ಡ ಕುಳವೇ, ಗದ್ದೆ ಸಾಗುವಳಿ, ತೋಟ ಗುಡ್ಡ ಇತ್ಯಾದಿ ಏನಾದರೂ ಇದೆಯೇ ಎಂದು ವಿಚಾರಿಸಬೇಡವೇ? ಹೆಣ್ಣಿನ ತಂದೆ ಮಾವ ಹುಡುಗನನ್ನು ಮನೆಯಿಂದ ಹೊರಗೆ ಕರೆದು ವಿಚಾರಿಸಲು ತೊಡಗಿದರು. ಹುಡುಗ ಅವರನ್ನು ಮನೆಯ ಹಿಂದೆ ಕರೆದೊಯ್ದು, ಒಂದು ಎತ್ತರದ ದಿಣ್ಣೆಯ ಮೇಲೆ ನಿಂತು ಸೊಂಟದಲ್ಲಿ ಕೈ ಇಟ್ಟುಕೊಂಡು ಹೀಗೆ ಹೇಳಿದ: "ನೋಡಿ ನೆಂಟರೇ, ನನ್ನನ್ನು ನೋಡಿದಿರಷ್ಟೇ? ಇಲ್ಲಿಂದ ಮೇಲಿನದೂ ನನ್ನದೇ, ಇಲ್ಲಿಂದ ಕೆಳಗಿನದೂ ನನ್ನದೇ".

ನೆಂಟರು ಆತ ನಿಂತಲ್ಲಿಂದ ಮೇಲೆ ಕೆಳಗೆ ಸುತ್ತ ಮುತ್ತ ಎಲ್ಲ ನೋಡಿದರು. ಕೆಳಗೆ ನೋಡಿದರೆ

ಸುಮಾರು ದೂರದವರೆಗೆ ಬೈಲು ತೋಟ ಕಾಣುತ್ತದೆ. ಮೇಲಕ್ಕೂ ಹಾಗೆಯೇ ಗುಡ್ಡ ಕಾಡು, ಓತ್ತಿಲು ಬೆಳೆದು ನಿಂತ ಮರಗಳು ಕಾಣುತ್ತವೆ. ಅಡ್ಡಿಯಿಲ್ಲ, ದೊಡ್ಡ ಕುಳವೇ ಎಂದುಕೊಂಡರು.

ಹುಡುಗ ಆದೀತು ಎಂದಾಯಿತು. ಹುಡುಗನ ಕಡೆಯೂ ಆದೀತು ಎಂದಾಯಿತು. ಹಾಗಾಗಿ ಮದುವೆಯೂ ನಡೆದುಹೋಗಿ ಔತಣವೂ ಆಯಿತು. ಹುಡುಗಿಯನ್ನು ಹರಸಿ, ಗಂಡಿನ ಮನೆಗೆ ಕಳುಹಿಸಿ ಆಯಿತು. ಬಂದ ಹುಡುಗಿಯನ್ನು ಹೊಸ್ತಿಲು ದಾಟಿಸಿ ಮನೆ ಸೇರಿಸಿದರು. ಹೊಕ್ಕ ಮನೆ ಹೆಣ್ಣಿನದು ಎಂದರು ಅತ್ತೆ – ನಾದಿನಿಯರು. ಅಂದಿನ ದಿನ ಕಳೆಯಿತು. ಬಂದ ನೆಂಟರು ಮರಳಿದರು. ಮದುವೆಯಾಗಿ ಬಂದ ಹೆಣ್ಣಿಗೆ ಮನೆಯ ಸ್ಥಿತಿಗತಿ ತಿಳಿಯಿತು. ಕಾಗೆ ತೂರಿ ಹೋಗುವ ಒಂದು ಮನೆ ಹೊರತು ಗಂಡನಿಗೆ ಅಂಗೈ ಅಗಲದಷ್ಟು ಜಾಗ ಬಿಟ್ಟು ಬೇರೇನೂ ಕಾಣದು ಆಕೆಗೆ.

ಗಂಡನ ಮನೆಗೆ ಕಳುಹಿಸಿಕೊಟ್ಟ ಹೆಣ್ಣನ್ನು ಮರಳಿ ತಾಯಿ ಮನೆಗೆ ಕರೆತಂದರು. ಮತ್ತೆರಡು ದಿನ ಕಳೆಯಿತು. ಗಂಡಿನ ಮನೆಯಿಂದ ಕತೆತಂದ ಹೆಣ್ಣನ್ನು ಕರೆದೊಯ್ದರು. ಅಳಿಯನ ಸ್ಥಿತಿಗತಿ ಮಾವನಿಗೆ ಈಗ ಅರ್ಥವಾಗಿದೆ. ಮಗಳನ್ನು ಕರೆತರಲು ಈ ಬಾರಿ ಹುಡುಗಿಯ ತಂದೆಯೇ ಬಂದವನು ಸಿಡುಕಿನಲ್ಲೇ ಮಾತುಕತೆಗೆ ತೊಡಗಿದನು.

"ನಿನ್ನ ಮನೆಯಲ್ಲಿ ನೀರು ಮುಟ್ಟಬೇಕೆಂದಿದ್ದರೆ ನನ್ನ ಮಾತುಗಳಿಗೆ ಉತ್ತರ ಕೊಡಬೇಕು. ಹೌದೇನೋ, ನೀನು ಹೇಳಿದ್ದೇನು? ಮಾಡಿದ್ದೇನು? ಎಲ್ಲಿಯೋ ಅದು ನಿನಗೆ ಕೆಳಗೂ ಮೇಲೂ ಇರುವಂತಾದ್ದು? ಎಲ್ಲಿದೆ ನೀನು ಹೇಳಿದ್ದು? ತೋರಿಸಿದ್ದು? ಯಾವ ಸುಖ ಸಂಪತ್ತಿಗೆ ನಿನಗೆ ನನ್ನ ಮಗಳನ್ನು ಧರ್ಮಧಾರೆ ಎರೆದು ಕೊಟ್ಟದ್ದು?"

"ನೋಡಿ ಮಾವ! ನಾನು ಹೇಳಿದ್ದರಲ್ಲಿ ಏನು ತಪ್ಪಿದೆ? ಈ ಸೊಂಟದಿಂದ ಮೇಲಕ್ಕೂ ಕೆಳಕ್ಕೂ ನನ್ನದೇ ಎಂಬುದನ್ನು ನಾನು ಮೊದಲೇ ಹೇಳಿಲ್ಲವೆ? ಈಗ ನೀವೇ ಹೇಳಿ ಮಾವ! ಇಲ್ಲಿಂದ ಕೆಳಗೂ ಮೇಲಕ್ಕೂ ಮತ್ತೆ ಯಾರದ್ದು? ನನ್ನವೇ ಅಲ್ಲವೆ? ಈಗ ನಿಮ್ಮ ಮಗಳದ್ದೇ ಅಲ್ಲವೇ?" ಅಳಿಯ ಸೊಂಟದ ಮೇಲೆ ಕೈ ಇರಿಸಿ ಮತ್ತೊಮ್ಮೆ ಹೇಳಿಕೊಂಡ.

ಇನ್ನು ಅಳಿಯನಲ್ಲಿ ಜಗಳವಾಡಿದರೆ ಮಗಳಿಗೆ ಗಂಡ ಸಿಗುವಂತಿಲ್ಲ! ಎಂದುಕೊಂಡ ತಂದೆ ಉಸಿರುಕಟ್ಟಿ ಕೂತಿರಬೇಕಾಯಿತು.

ಉಮಿಯಿಂದ ಹಗ್ಗ ಬಿಟ್ಟು ಕೊಡಬೇಕು

ಒಂದು ಬಾರಿ ನಾಲ್ಕೈದು ಮಂದಿ ಒಟ್ಟಾಗಿ ಒಂದು ಊರಿಗೆ ಹೆಣ್ಣು ನೋಡಲು ಹೊರಟರು. ಅವರಲ್ಲಿ ಓರ್ವ ಪ್ರಾಯ ಸಂದ ವ್ಯಕ್ತಿಯೂ ಇದ್ದರು. ಆದರೆ ಈ ಕೂಟದಲ್ಲಿ ಜನರಿಗೆ ಈ ಮುದುಕ ತಮ್ಮೊಡನಿರುವುದು ಇಷ್ಟವಿರಲಿಲ್ಲ. ಹಾಗಾಗಿ ಅವರು ಒಂದು ಸಂಚು ಹೂಡಿದರು. "ಅಜ್ಜಾ ಅಜ್ಜಾ ನಾವು ಬೇಗ ಹೋಗಿ ಬರುತ್ತೇವೆ. ನಿಮಗೆ ಅಷ್ಟು ದೂರ ನಡೆಯುವುದಕ್ಕೂ ಕೂಡದು. ನೀವು ಇಲ್ಲೇ ಈ ಮರದ ಬುಡದಲ್ಲಿ ಕುಳಿತಿರಿ" ಎಂದರು ಉಳಿದವರು. ಆ ವ್ಯಕ್ತಿ ಉಪಾಯವಿಲ್ಲದೆ ಅಲ್ಲೇ ಉಳಿಯಬೇಕಾಯಿತು.

ಹೋದ ಮನೆಯಲ್ಲಿ ಇವರನ್ನು ಸ್ವಾಗತಿಸಿ, ಕೈಕಾಲು ತೊಳೆಯಲು ನೀರು ಕೊಟ್ಟರು. ಕುಳಿತುಕೊಳ್ಳಲು ಚಾಪೆ ಹಾಕಿದರು. ಆಸರಿಗೆ ಬೆಲ್ಲ ನೀರು ತಂದಿಟ್ಟರು. ತಿನ್ನಲು ಎಲೆ ಅಡಿಕೆ ಮುಂದಿಟ್ಟರು. ಬಂದವರ ಪರಿಚಯ ವಿಚಾರಿಸಿಕೊಂಡರು ಮನೆಯವರು. ಹೀಗೆ ಮಾತುಕತೆಗೆ ತೊಡಗಿದಾಗ ಆ ಊರಿನ ಗುರಿಕಾರ ಬಂದ ನೆಂಟರಲ್ಲಿ ಹೀಗೆ ಹೇಳಿದ "ಈಗ ನಿಮ್ಮ ಊರಲ್ಲೂ ಬಹಳಷ್ಟು ಕಟ್ಟುಕಟ್ಟಳೆಗಳು ಇದ್ದೀತು. ನಮ್ಮ ಊರಲ್ಲಿ ಒಂದು ರೂಢಿಯಿದೆ ನೋಡಿ! ಬಂದವರು ಉಮಿಯಿಂದ ಹಗ್ಗ ಮಾಡಿ ಕೊಡಬೇಕು. ನಿಮಗೆ ನಮ್ಮ ಊರಿನ ಹುಡುಗಿ ಮೆಚ್ಚಿಗೆಯಾಗಿದ್ದರೆ ನೀವು ಈ ಸವಾಲನ್ನು ಎದುರಿಸಬೇಕು."

ಇದನ್ನು ಕೇಳಿಸಿಕೊಂಡ ತರುಣರಿಗೆ ಬೆವರಲು ತೊಡಗಿತು. ಅವರೇನೂ ಮಾಡಲು ತೋಚದೆ ಪರಸ್ಪರ ಮುಖ ನೋಡಿಕೊಂಡರು. ಆಗ ಅವರಿಗೆ ತಮ್ಮೊಡನಿದ್ದ ಪ್ರಾಯದ ವ್ಯಕ್ತಿಯ ನೆನಪಾಯಿತು. "ಸ್ವಲ್ಪ ನಿಲ್ಲಿ. ನಮ್ಮ ಗುಂಪಿನ ಓರ್ವ ವ್ಯಕ್ತಿ ಹಿಂದೆ ಉಳಿದು ಬಿಟ್ಟಿದ್ದಾರೆ. ಅವರನ್ನು ಕರೆತರುತ್ತೇವೆ" ಎಂದು ಗುರಿಕಾರನ ಅನುಮತಿ ಕೇಳಿ ತಿರುಗಿ ಬಂದರು.

ಬಂದ ಯುವಕರನ್ನು ನೋಡಿ, "ಏನಾಯ್ತು ಮಕ್ಕಳೇ? ಹೋದ ಕೆಲಸ ಹೂವೇ ಕಾಯೇ?" ಕೇಳಿದರು. ಅವರೆಲ್ಲಾ ಅಜ್ಜನಲ್ಲಿ ಸಂಗತಿ ಹೀಗಾಗಿದೆ ಎಂದು ಅವರನ್ನು ಬರಲು ವಿನಂತಿಸಿಕೊಂಡರು.

"ನನ್ನನ್ನು ಬಿಟ್ಟು ಹೋದ ನಿಮಗೆ ಹೀಗೇ ಆಗಬೇಕು" ಎಂದು ಮನಸ್ಸಿನಲ್ಲೇ ಹೇಳಿಕೊಂಡ ಹಿರಿಯವ್ಯಕ್ತಿ ಅವರೊಂದಿಗೆ ಹೊರಟರು. ಅವರೆಲ್ಲ ಮತ್ತೆ ಅವರ ಮನೆಗೆ ಬಂದರು. "ಏನಂತೆ ಉಮಿಯಿಂದ ಹಗ್ಗ ಮಾಡಿ ಕೊಡಬೇಕೇನೋ? ಅದಕ್ಕೇನು ಕೊಡೋಣ. ಅವರ ಉಮಿಯೂ ಬರಲಿ. ಬುಟ್ಟಿಯಲ್ಲಿ ನೀರೂ ಬರಲಿ. ಹಗ್ಗ ಮಾಡಿ ಕೊಡೋಣ" ಹೀಗೆ ಬಂದ ಅಜ್ಜ ಒಂದು ಸವಾಲು ಹೂಡಿದರು. ಇದನ್ನು ಕೇಳಿ ಅಲ್ಲಿನ ಗುರಿಕಾರ ಅಜ್ಜನ ಅನುಭವವನ್ನು ಮೆಚ್ಚಿಕೊಂಡರು. ಬುಟ್ಟಿಯಲ್ಲಿ ನೀರು ಬರುವುದೂ ಇಲ್ಲ. ಉಮಿಯಿಂದ ಹಗ್ಗ ಆಗುವುದೂ ಇಲ್ಲ. "ಸವಾಲಿಗೊಂದು ಸವಾಲು" ಇದು.

ಇಬ್ಬರಿಗೆ ಗಂಡ, ತಲೆಗೆ ಟೊಪ್ಪಿ

ಒಬ್ಬನಿಗೆ ತಲೆ ಹಣ್ಣಾಗುವ ಹರೆಯದಲ್ಲಿ ತರುಣಿ ಹೆಂಡತಿ ಬೇಕೆಂಬ ಬಯಕೆಯಾಯಿತು. ಪ್ರಾಯ ಸಂದಿತು. ಇನ್ನು ಆಕೆ ಮುದಿ ಹೆಂಡತಿ ಪ್ರಯೋಜನಕ್ಕಿಲ್ಲ ಎಂದು ಎಳೆಪ್ರಾಯದ ಹೆಣ್ಣನ್ನು ಎರಡನೆಯ ಹೆಂಡತಿಯನ್ನಾಗಿಸಿಯೇ ಕೊಂಡ. ಒಬ್ಬಳು ಮುದಿ ಹೆಂಡತಿ, ಇನ್ನೊಬ್ಬಳು ಹದಿ ಹೆಂಡತಿ. ಆದರೆ ಈ ಮುದಿ ಹದಿ ಹೆಂಡಿರು ಒಟ್ಟು ಸೇರಿ ಗಂಡನನ್ನು ಮಾತ್ರ ಲಗಾಡಿ ತೆಗೆದರು. ಅದು ಹೇಗೆ? ಕತೆ ಹೀಗಿದೆ.

ಮುದಿ ಹೆಂಡತಿ ಏನು ಮಾಡಿದಳು ಗೊತ್ತೇ? ತನ್ನ ಗಂಡ ತನ್ನಂತೆಯೇ ಮುದಿಯಾಗಿರಬೇಕು ಎಂದು ಅಪೇಕ್ಷೆ ಪಟ್ಟಳು. ಹಾಗಾಗಿ ರಾತ್ರಿ ಆತ ನಿದ್ದೆಯಲ್ಲಿರುವ ಹೊತ್ತು ಆತನ ತಲೆಯಲ್ಲಿದ್ದ ಕರಿ ಕೂದಲುಗಳನ್ನೆಲ್ಲ ದಿನಾ ಕಿತ್ತು ತೆಗೆಯತೊಡಗಿದಳು. ಹದಿ ಹೆಂಡತಿಯೂ ಬಯಸಿದ್ದೂ ಅದನ್ನೇ. ತನ್ನ ಗಂಡ ತನ್ನಂತೆ ಎಳೆ ಪ್ರಾಯದವನಂತಿರಬೇಕು. ಅದಕ್ಕಾಗಿ ಆತ ನಿದ್ರೆಯಲ್ಲಿದ್ದಾಗ ತಲೆಯಲ್ಲಿ ಇರಬಹುದಾದ ಬಿಳಿ ಕೂದಲುಗಳನ್ನೆಲ್ಲ ದಿನಾ ಕಿತ್ತು ತೆಗೆದಳು. ಅವರಿಬ್ಬರೂ ಒಬ್ಬರಿಗೊಬ್ಬರು ತಿಳಿಯದಂತೆ ಈ ಕೆಲಸವನ್ನು ಹೇಗೆ ನಿರ್ವಹಿಸಿದರು ಎನ್ನುವುದನ್ನು ಮಾತ್ರ ಯಾರೂ ಕೇಳಬೇಡಿ; ಅದು ತೀರಾ ಖಾಸಗಿ ಸಂಗತಿಗಳೆಂದುಕೊಳ್ಳೋಣ. ಸರದಿಯಿಲ್ಲದಿರಲಾರದು. ಅಂತೂ ತುಂಬುರ ನಾರದರು ಬಯಸಿದ್ದ ಮಂಗ ಕೋಡಗನ ಸಂದರ್ಭದಂತೆ.

ಈ ಇಬ್ಬರು ಹೆಂಡಿರ ವ್ಯವಸ್ಥೆಯಲ್ಲಿ ಪಾಪ ಗಂಡನ ಅವಸ್ಥೆಯನ್ನು ಹೇಳಿ ಪ್ರಯೋಜನವಿಲ್ಲ. ತಿಂಗಳು ಕಳೆದು ನೋಡಿದರೆ ಅವನ ತಲೆಗೇ ಅಮಾವಾಸ್ಯೆ ಪ್ರಾಪ್ತವಾಗಿದೆ. ಹರಕೆಗೆ ಒಂದಾದರೂ ಕರಿ ಕೂದಲಾಗಲೀ ಬಿಳಿ ಕೂದಲಾಗಲೀ ಹುಡುಕಿದರೆ ಸಿಗದಂತೆ ತಲೆ ಖಾಲಿಯಾಗಿದೆ. ಬೋಳಾಗಿದೆ. ಸಾಣೆಗೆ ಹಿಡಿದಂತೆ ಬೋಳು ಮಂಡೆ ಹೊಳೆಯುತ್ತಿತ್ತು. ಏನೆಂದು ಹೇಳಲಿ; ಇಬ್ಬರು ಹೆಂಡಿರನ್ನು ಕಟ್ಟಿಕೊಂಡು ಅವನ ತಲೆಗೆ ಟೊಪ್ಪಿಯೇ ಗತಿಯಾಯಿತು. ಕಟ್ಟಿಕೊಳ್ಳುವುದು ಬಿಡಿ! ಕರೆದು ಕೊಟ್ಟರೂ ಬೇಡ ಇಬ್ಬರು ಹೆಂಡಿರು ಎಂಬ ಸ್ಥಿತಿ ಅವನದಾಯಿತು.

ಎಂಕು ಪಣಂಬೂರಿಗೆ ಹೋದ ಹಾಗೆ!

"ನಾಳೆ ಪಣಂಬೂರಿಗೆ ಒಂದು ಬಾರಿ ಹೋಗಿ ಬರಬೇಕಿತ್ತಲ್ಲ?" ರಾತ್ರಿ ಮಲಗುವ ಮೊದಲು ಗಂಡ ಹೆಂಡತಿಯಲ್ಲಿ ಹೇಳಿಕೊಂಡ. "ಅದಕ್ಕೆ ಏನಾಗಬೇಕು ನಮ್ಮ ಎಂಕು ಇಲ್ಲವೇ?" ಹೇಳಿದಳು ಹೆಂಡತಿ. "ಅದೂ ಹೌದು! ಹೇಳಿದ ಹಾಗೆ" ಗಂಡನೆಂದ. ಗಂಡ ಹೆಂಡತಿ ಮಾತುಕತೆ ನಡೆಸುವುದನ್ನು ಹೊರಗೆ ಜಗಲಿಯಲ್ಲಿ ಮಲಗಿದ್ದ ಎಂಕು ಕಿವಿಗೊಟ್ಟು ಚೆನ್ನಾಗಿ ಕೇಳಿಸಿಕೊಂಡ.

ಮರುದಿನ ಬೆಳಿಗ್ಗೆ ಎದ್ದು ಎಂಕುವನ್ನು ಪಣಂಬೂರಿಗೆ ಕಳುಹಿಸೋಣವೆಂದು ನೋಡಿದರೆ ಎಂಕು ಕಾಣೆ. ಎದ್ದು ಕೋಣಗಳಿಗೆ ಬೈ ಹುಲ್ಲು ಹಾಕಲು ಇಲ್ಲವೇ ಅಕ್ಕಚ್ಚು ಕಾಯಿಸಲು ಹೋಗಿರಬೇಕು ಎಂದುಕೊಂಡರೆ ಹೊತ್ತು ಎರಡು ಮಾರು ಬಂದರೂ ಎಂಕುವಿನ ಪತ್ತೆಯಿಲ್ಲ. "ಬೆಳಿಗ್ಗೆ ಇವನ ಸಂಚಾರ ಎಲ್ಲಿ ಹೋಗಿದೆಯಪ್ಪ?" ಎಂದು ಎಂಕುವನ್ನು ಹುಡುಕುತ್ತಿದ್ದರೆ, ಹಲ್ಲುಜ್ಜಿಕೊಂಡು ಎಂಕು ಕಟ್ಟಹುಣಿಯಲ್ಲಿ ಬರುವುದು ಕಂಡು ಬಂತು. ಆತ ಅಂಗಳ ಹತ್ತುವಾಗ ಸಿಟ್ಟಿನಲ್ಲೇ, "ಇಷ್ಟು ಬೆಳಿಗ್ಗೆ ನಿನ್ನ ಸವಾರಿ ಎಲ್ಲಿ ಹೋಗಿದೆ?" ಎಂದು ಕೇಳಿದರೆ, "ನಿನ್ನೆ ನೀವೇ ಅಲ್ವಾ ಮಾತನಾಡುತ್ತಿದ್ದುದು ಎಂಕುವನ್ನು ಪಣಂಬೂರಿಗೆ ಒಂದು ಬಾರಿ ಕಳುಹಿಸಿಕೊಡಬೇಕು ಎಂದು ಈಗ ಎಲ್ಲಿಗೆ ಹೋಗಿದ್ದಿ ಎಂದು ಕೇಳುತ್ತಿದ್ದೀರಾ?"

"ಹೌದಾ! ನೀನು ಪಣಂಬೂರಿಗೆ ಹೋಗಿ ಬಂದೆಯಾ ಏಕೆ ಹೋದಿ? ಹೋದ ಕೆಲಸವೇನಾಯಿತು?" ಎಂದು ಕೇಳಿದರೆ "ಅದು ನನಗೇನು ಗೊತ್ತು? ನೀವು ನನ್ನಲ್ಲಿ ಕೆಲಸ ಏನೆಂದು ಹೇಳಿದ್ದೀರಾ? ಹೋಗಲು ಹೇಳಿದ್ದಿರಿ. ನಾನು ಹೋಗಿ ಬಂದೆ" ಎಂಕು ಹೀಗೆ ಹೇಳಲು "ಹೇಗೆ ನಮ್ಮ ಎಂಕು?" ಗಂಡ ಹೆಂಡತಿ ಮುಖ ಮುಖ ನೋಡಿಕೊಂಡರು. ಹೀಗೆ "ಎಂಕು ಪಣಂಬೂರಿಗೆ ಹೋದ ಹಾಗೆ" ಎಂಬ ಗಾದೆಯೊಂದು ಉಂಟಾಯಿತು. ಹಾಗೆಯೇ ಕುಟ್ಟಿ ಕುಂದಾಪುರಕ್ಕೆ ಒಮ್ಮೆ ಹೋಗಿದ್ದನಂತೆ.

ಆಚಕ್ಕ ಮಲಗಿದ್ದಾಳೆ; ನಾನು ಕುಳಿತಿದ್ದೇನೆ!

ತುಂಬಿದ ಬಸುರಿ ಮನೆಯಲ್ಲಿ ಇದ್ದರೆ ಅವಳು ಎಂದು ಹೆರುತ್ತಾಳೆ ಹೇಳಲಾಗದು. ಆಕೆಗೆ ಯಾವ ಹೊತ್ತು ಹೆರಿಗೆ ನೋವು ಬಂದೀತು ಎನ್ನಲಾಗದು. ಅದು ನಡುರಾತ್ರಿಯೂ ಆಗಿರಬಹುದು. ಆಗ ಸೂಲಗಿತ್ತಿಗೆ ಕರೆ ಹೋಗಿ ಆಕೆಯನ್ನು ಕರೆತರಬೇಕು. ಒಂದು ಮನೆಯಲ್ಲಿ ಗಂಡ ಹೆಂಡತಿ ಇಬ್ಬರೇ ಇರುವುದಾದಲ್ಲಿ ಹೆರುವವರನ್ನು ನೋಡಿಕೊಳ್ಳುವವರಾರು? ಹೆರಿಸುವವರನ್ನು ಕರೆತರಲು ಹೋಗುವವರಾರು?

ಒಂದು ವೇಳೆ ಸೂಲಗಿತ್ತಿಗೆ ಆಳು ಹೋದರೂ ಕೂಡ ಆಕೆ ಬರುವುದರೊಳಗೆ ಮಗು ಹುಟ್ಟುತ್ತಿತ್ತು. ಕೆಲವೊಮ್ಮೆ ಹುಟ್ಟಿದ ಮಗುವು ವಿಚಿತ್ರದ್ದಾಗಿರುತ್ತಿತ್ತು. ಒಂದಕ್ಕೊಂದು ಅಂಟಿಕೊಂಡ ಅವಳಿ ಮಕ್ಕಳು, ತಲೆಯಲ್ಲಿ ಕೋಡು, ಮೂರು ಕೈಕಾಲು ಹೀಗೆಲ್ಲ ಒಂದಕ್ಕೊಂದು.

ಒಂದು ಮನೆಯಲ್ಲಿ ಗಂಡ ಹೆಂಡತಿ ಮಾತ್ರ ಇದ್ದರು. ಆಕೆ ಗರ್ಭಿಣಿ. ರಾತ್ರಿ ಹೊತ್ತು ಆಕೆಗೆ ಹೆರಿಗೆ ಸಂಕಟ ತೊಡಗಿತ್ತು. ಇರುಳು ಯಾರನ್ನು ಎಬ್ಬಿಸುವುದು? ಉಪಾಯವಿಲ್ಲದೆ ಗಂಡ ಹೆಂಡತಿಯನ್ನೊಬ್ಬಳನ್ನೇ ಬಿಟ್ಟು ಸೂಲಗಿತ್ತಿಯನ್ನು ಕರೆತರಲು ಹೋಗಲೇ ಬೇಕಾಗಿ ಬಂತು. ಆಕೆಯದ್ದೇನು ನೆರೆಮನೆಯೇ? ಬೈಲು ಗುಡ್ಡ ಕಾಡು ದಾಟಿ ಆಚೆ ಹೋಗಬೇಕು.

ಹೋದವನು ಸೂಲಗಿತ್ತಿಯನ್ನು ಕರೆತರುವಷ್ಟರಲ್ಲಿ ಇಲ್ಲಿ ಮಗು ಕೆಳಗೆ ಬಿದ್ದಾಗಿದೆ. ಹುಟ್ಟಿದ ಮಗು ಗಳಿಗೆಯಲ್ಲಿ ಎದ್ದು ಕುಳಿತಿತ್ತು. ಕಣ್ಣು ಬಿಟ್ಟು ತಾಯಿಯನ್ನು ನೋಡಿತ್ತು. ಕುಳಿತ ಮಗು ಅರೆಗಳಿಗೆಯಲ್ಲಿ ಎದ್ದು ನಿಂತಿತ್ತು. ತಾಯಿಗಿಂತಲೂ ದೊಡ್ಡದಾಗಿ ಬೆಳೆಯಿತು. ಗಾಳಿಗೆ ಬೆಳೆದು ಬೆಳೆದು ಅಟ್ಟದ ವರೆಗೆ ಮುಟ್ಟಿತ್ತು. ಮಗು ಹೋಗಿ ಮಹಾರಾಯನಾಗಿದ್ದಾನೆ.

ಇದು ಸೋಜಿಗದ ಸಂಗತಿ. ಇಷ್ಟರಲ್ಲಿ ಇದು ಕೊನೆಗೊಳ್ಳಲಿಲ್ಲ. ಹಿಡಿತಕ್ಕೆ ಸಿಗದಷ್ಟು ಉದ್ದ ಅಗಲ ಆಗಿ ಹೋದ ದೈತ್ಯ ಮಗು ಹಸಿವೆಗೆ ತಿನ್ನಲು ಬೇಕೆಂದು ಆರ್ಭಟಿಸಿತು. ಹೆರಿಗೆ ಸಂಕಟದ ತಾಯಿ ಏನು ಕೊಟ್ಟಾಳು? ಈ ರಾಕ್ಷಸ ಪುತ್ರನನ್ನು ಕಂಡು ಆಕೆಗೆ ಅಚ್ಚರಿಯೂ ಆಗಿರಬಹುದು. ತಲೆ ತಿರುಗಿರಲೂ ಬಹುದು. ಏನೆಂದು ಹೇಳಲಿ? ದೈತ್ಯ ಗಾತ್ರದ ಮಗು ತಾಯಿಯ ಎದೆಯ ಮೇಲೆ ಕುಳಿತು ಮೊಲೆ ಹಾಲು ಚೀಪುವ ಬದಲು ರಕ್ತವನ್ನು ಹೀರಿತ್ತು. ಆಕೆಯನ್ನು ಹೀರಿ ಕೊಂದೇ ಹಾಕಿತ್ತು.

ಇಷ್ಟರಲ್ಲಿ ಗಂಡ ಸೂಲಗಿತ್ತಿಯನ್ನು ಕರೆತಂದ. ಆದರೆ ಒಳಗೆ ಹೊರಳುವ, ನರಳುವ ಸದ್ದಿಲ್ಲ. ಹಾಗಾಗಿ ಬಾಗಿಲು ದೂಡುವ ಮೊದಲು ಕಿಟಕಿಯಲ್ಲಿ ಇಣಿಕಿ "ಆಚಕ್ಕ ಆಚಕ್ಕ" ಎಂದು ಕರೆಯುತ್ತಾನೆ. ಆಗ ಒಳಗಿನಿಂದ ಕೇಳಿಬಂದ ಧ್ವನಿ "ಆಚಕ್ಕ ಮಲಗಿದ್ದಾಳೆ, ನಾನು ಕುಳಿತಿದ್ದೇನೆ." ಏನನ್ನು ನೋಡುವುದು? ಅಮ್ಮ ಆಚಕ್ಕನ ಎದೆಯ ಮೇಲೆ ಕುಳಿತು ನೆತ್ತರು ಹೀರುತ್ತಿರುವುದು ಕಂಡಿತು. ಈ ಭಯಾನಕ ನೋಟ ಕಂಡ ಗಂಡನಿಗೆ ನೆಲದಲ್ಲಿ ಹೆಜ್ಜೆ ನಿಲ್ಲಲಿಲ್ಲ. ಏನೂ ಮಾಡುವಂತಿರಲಿಲ್ಲ. ಎನ್ನುವುದರೊಳಗೆ ಜೋಡು ನಳಿಗೆಯ ಕೋವಿ ತರಿಸಿ, ಕಿಟಿಕಿ ಸಂದಿನಲ್ಲಿ ಗುರಿಯಿಟ್ಟು ಆ ರಾಕ್ಷಸ ಸಂತಾನವನ್ನು ಕೊಲ್ಲಬೇಕಾಗಿ ಬಂತು.

ನಿನ್ನ ಒಂದು ಪಕ್ಕೆ ತುಂಬದೇ ಹೋಗಲಿ!

ಶ್ರೀ ಕೃಷ್ಣ ದೇವರು ಗೋವುಗಳನ್ನು ಮೇಯಿಸಲು ಅಟ್ಟಿಕೊಂಡು ಹೋಗಿದ್ದಾರೆ. ಒಂದು ಬೆಳಗ್ಗೆ ಅಟ್ಟಿಕೊಂಡು ಹೋದರೆ ಒಂದು ಸಂಜೆಯವರೆಗೆ ಗುಡ್ಡ ಮೈದಾನುಗಳಲ್ಲಿ ಗೋವುಗಳನ್ನು ಮೇಯಿಸಿಯಾರು. ತನ್ನ ಜೊತೆಯಲ್ಲಿರುವ ಮಕರಂದ ಮೊದಲಾದ ಗೋವಳರನ್ನು ದನಗಾಹಿಗಳಾಗಿ ನಿಲ್ಲಿಸುವರು. ಅವರ ಕೈಯಲ್ಲಿ ಮೋಹನ ಮುರಲಿಯಿದೆ. ಗೋವುಗಳನ್ನು ಮೇಯಲು ಬಿಟ್ಟು ಅವರು ಯಾವುದಾದರೂ ಒಂದು ಮರ ಹತ್ತಿ ಕೊಳಲು ಊದುತ್ತಾ ಕುಳಿತಾರು. ಅವರ ಕೊಳಲಿನ ಸವಿದನಿಗೆ ಕಾಡಿನ ಮೃಗ ಪಕ್ಷಿಗಳೆಲ್ಲಾ ಮರುಳಾಗಿ ಹೋದಾವು.

ಹೊತ್ತಾದಾಗ ಕೊಳಲು ಊದಿ ಮೇಯಲು ಹೋಗಿರುವ ಗೋವುಗಳನ್ನು ಹಿಂತಿರುಗಲು ಹೇಳಿಯಾರು. ತನ್ನ ಒಟ್ಟಿಗೆ ಇರುವ ಇತರ ಗೋಪಾಲರೊಂದಿಗೆ ಬುಗರಿ, ಲಗೋರಿ, ಕುಟ್ಟಿದೊಣ್ಣೆ ಆಡಿ ಬೇಸರ ಕಳೆದಾರು. ಗೋ ಮಂದೆಯೊಳಗೆ ನುಗ್ಗಿ ಅಪಹರಿಸಲು ಬಂದಿರುವ ಕಳ್ಳರನ್ನು ಹೊಡೆದೋಡಿಸಿಯಾರು. ನಡೆಯಲು ಕೂಡದ ದನಕರುಗಳ ಜೊತೆಗೆ ನಿಧಾನವಾಗಿ ನಡೆದಾರು. ಬಸುರಿ ಹಸುಗಳ ಜೊತೆಯಲ್ಲಿ ಮೆಲ್ಲ ಮೆಲ್ಲನೆ ಹೆಜ್ಜೆ ಇಟ್ಟಾರು. ಗುಡ್ಡದಲ್ಲಿ ಮೇಯುತ್ತಿರುವಾಗ ಕರು ಹಾಕಿದ ಹಸುಗಳ ಮನೆಯವರಿಗೆ ಮಕರಂದನಲ್ಲಿ ಹೇಳಿ ಕಳುಹಿಸಿಯಾರು.

ಮಕರಂದ ಹೋಗಿ, "ಅಮ್ಮಾ ಅಮ್ಮಾ, ನಿಮ್ಮ ಹಸು ಗುಡ್ಡದಲ್ಲಿ ಕರು ಹಾಕಿದೆ, ಹೌದಮ್ಮಾ; ಶ್ರೀ ಕೃಷ್ಣ ದೇವರು ನಿಮ್ಮಲ್ಲಿ ತಿಳಿಸಲು ನನ್ನಲ್ಲಿ ಹೇಳಿ ಕಳುಹಿಸಿದ್ದಾರೆ. ನಾನು ಮಕರಂದ, ಬನ್ನಿಯಮ್ಮಾ! ಎಲ್ಲಿ ಏನೆಂದು ನಿಮಗೆ ತೋರಿಸುತ್ತೇನೆ" ಎಂದು ಓಲೆ ಕೊಟ್ಟಾನು.

ಕತ್ತಲೆಯಾದರೂ ಹಟ್ಟಿ ಕಡೆ ತಿರುಗದೆ ತಲೆಯೆತ್ತದೆ ಮತ್ತೆ ಮತ್ತೆ ಮೇಯುವುದರಲ್ಲಿಯೇ ಬಿದ್ದಿರುವ ಹಸುಗಳನ್ನು "ಮೈರೆ ಬಾ, ಬಾಚ ಬಾ, ಕಾಳಿ ಬಾ, ಗೆಂದೆ ಬಾ, ರಾಧೆ ಬಾ, ಗಿರಿಜೆ ಬಾ" ಎಂದು ಕರೆದಾರು. ಹಸುರು ಹಸುರು ಹುಲ್ಲು ಮೆಯ್ದು, ನೀರು ಕುಡಿದು ಎರಡೂ ಪಕ್ಕೆಗಳು ತುಂಬಿರುವ ಗೋವುಗಳನ್ನು ನೋಡಿ ಶ್ರೀ ಕೃಷ್ಣ ದೇವರಿಗೆ ಹೊಟ್ಟೆ ತುಂಬೀತು. ಎದೆ ಉಕ್ಕೀತು. ಬೇನೆ ಬೇಸರ ಕಳೆದೀತು.

ಒಮ್ಮೆ ಒಂದು ಹೋರಿ ಮೇಯುವುದರಲ್ಲಿಯೇ ಮಗ್ನವಾಗಿತ್ತು. ಶ್ರೀ ಕೃಷ್ಣ ದೇವರು ಕರೆದು ಹೇಳಿದರು, "ಹೊತ್ತು ಕಾಡ ಕಡೆಗೆ ಹೋಗಿದೆ. ನೆರಳು ತೋಡ ಬದಿಗೆ ಮುಟ್ಟಿದೆ. ಹೊತ್ತಾಯಿತು. ಸಾಕು ಮೇದದ್ದು ಹೋಗೋಣ" ಮತ್ತೆ ಬೈಗಿನ ರಾಗ ಊದಿ ನೆನಪು ಹುಟ್ಟಿಸಿದರು ಕೃಷ್ಣ ದೇವರು. ಆಗ ಒಂದು ಹೋರಿ ಹೇಳಿತು "ನನ್ನ ಒಂದು ಪಕ್ಕೆ ತುಂಬಲು ಬಾಕಿ ಇದೆ, ದೇವರೇ ಸ್ವಲ್ಪ ನಿಲ್ಲಿ". ಶ್ರೀ ಕೃಷ್ಣ ದೇವರು ಸ್ವಲ್ಪ ಕಾದು ನಿಂತರು; ಮತ್ತೆ ಕರೆದರು. "ಇನ್ನೂ ಸ್ವಲ್ಪ ಬಾಕಿಯಿದೆ" ಹೋರಿ ಹೇಳಿತು.

ಶ್ರೀ ಕೃಷ್ಣ ದೇವರಿಗೆ ಆಗ ಸಿಟ್ಟು ತಡೆಯದಾಯಿತು. "ನಿನ್ನ ಆ ಒಂದು ಪಕ್ಕೆ ತುಂಬುವುದೇ ಇಲ್ಲವೇ? ಇನ್ನು ಮುಂದೆ ಎಂದೂ ನಿನ್ನ ಆ ಒಂದು ಪಕ್ಕೆ ತುಂಬದೇ ಹೋಗಲಿ" ಎಂದು ಗೋಕುಲಕ್ಕೇನೇ ಶಾಪ ಕೊಟ್ಟರು. ಇಂದೂ ಕೂಡಾ ಎಮ್ಮೆ, ಹಸು, ಎತ್ತು, ಕೋಣಗಳ ಒಂದು ಪಕ್ಕೆ ತುಂಬದೇ ಇದ್ದೀತು. ಅದು ಎಂದೂ ತುಂಬದು. ಅದಕ್ಕೆ ಶ್ರೀ ಕೃಷ್ಣ ದೇವರ ಶಾಪವೇ ಹೇತು.

ಹಗ್ಗವನ್ನೇ ತಿಂದು ಹಗ್ಗ ಎಲ್ಲಿ ಕೇಳಿದಳು

ಒಂದು ಊರಿನಲ್ಲಿ ಒಬ್ಬ ರೈತನಿದ್ದ. ರೈತ ಬೆಳಗ್ಗೆ ಹೊಲಕ್ಕೆ ಹೋದರೆ ಹೊಲ ಉತ್ತು, ಎತ್ತುಗಳನ್ನು ಮೇಯಲು ಬಿಟ್ಟು ಮನೆಗೆ ಬರುವಾಗ ಮಧ್ಯಾಹ್ನ ತಿರುಗುತ್ತಿತ್ತು. ರೈತನ ಹೆಂಡತಿ ಅಷ್ಟು ಹೊತ್ತಾದರೂ ಗಂಡನಿಗೆ ಬಡಿಸುತ್ತಿರಲಿಲ್ಲ. "ಊಟಕ್ಕೆ ಬಡಿಸು" ಎಂದು ಹೇಳಿದರೆ "ಊಟ ಸಿದ್ಧವಾಗಿಲ್ಲ" ಎನ್ನುತ್ತಿದ್ದಳು. ಒಂದು ದಿನ ರೈತನಿಗೆ ಬಹಳ ಸಿಟ್ಟು ಬಂತು. ಸಿಟ್ಟಿನಲ್ಲಿ ಹೆಂಡತಿಯನ್ನು ತರಾಟೆಗೆ ತೆಗೆದುಕೊಂಡ.

ಆದರೆ ಹೆಂಡತಿ ಗಂಡನ ಸಿಟ್ಟಿಗೆ ಹೆದರುವವಳಲ್ಲ. "ನಿಮಗೇನು? ಹೋದರೆ ಒಂದೇ ಕೆಲಸ. ನನಗೆ ಮನೆಯಲ್ಲಿ ಎಷ್ಟು ಕೆಲಸವಿದೆಯೆಂದು ಗೊತ್ತಿದೆಯೇ ನಿಮಗೆ?" ಎಂದು ಗಂಡನಿಗೇ ಸವಾಲು ಹಾಕಿದಳು. ಇದನ್ನು ಕೇಳಿದ ರೈತ "ಹಾಗಾದರೆ ನಾಳೆಯಿಂದ ಗದ್ದೆ ಉಳುವುದಕ್ಕೆ ನೀನೇ ಹೋಗು. ಮನೆಕೆಲಸ ನಾನು ಮಾಡುತ್ತೇನೆ" ಎಂದ. "ಓಹೋಹೋ ನನಗೇನು ಗದ್ದೆ ಉಳುವುದಕ್ಕೆ ಗೊತ್ತಿಲ್ಲ ಎಂದುಕೊಂಡಿರಾ? ಆದೀತು. ನಾಳೆಯಿಂದ ನಾನೇ ಗದ್ದೆ ಕೆಲಸಕ್ಕೆ ಹೋಗುತ್ತೇನೆ. ನೀವು ಮನೆಯಲ್ಲಿ ಎಲ್ಲ ಕೆಲಸ ಮಾಡಿಡಿ" ಎಂದಳು ಆಕೆ. ಸರಿ, ಮರುದಿನ ಬೆಳಗ್ಗೆ ಹೆಂಡತಿ ಕಚ್ಚೆ ಕಟ್ಟಿಯೇ ಕಟ್ಟಿದಳು. ಎತ್ತುಗಳ ಜತೆ ಹೊಲಕ್ಕೆ ಹೋದಳು. ಎತ್ತುಗಳನ್ನು ಹೂಡಿ ಹೊಲ ಉಳುವುದಕ್ಕೆ ತೊಡಗಿದಳು.

ಇತ್ತ ರೈತ ಅಡುಗೆ ಮಾಡಲು ತೊಡಗಿದ. ಗಂಜಿ ಬೇಯಿಸಿ, "ಪಲ್ಯ ಏನು ಮಾಡುವುದು?" ಯೋಚಿಸಿದ. ಹೆಂಡತಿಗೆ ಬುದ್ಧಿ ಕಲಿಸಬೇಕು ಎಂದುಕೊಂಡ. ಬಾವಿಯ ಬಳಿಗೆ ಹೋದ. ಬಾವಿಯ ಹಗ್ಗ ತೆಗೆದ. ಮನೆಗೆ ತಂದು ಚೆನ್ನಾಗಿ ಕೊಚ್ಚಿ ಕೊಚ್ಚಿ ಅದರ ಪಲ್ಯ ಮಾಡಿಟ್ಟ.

ಹೊಲದಲ್ಲಿ ಉಳುತ್ತಿದ್ದ ರೈತನ ಹೆಂಡತಿಗೆ ಗದ್ದೆಯಲ್ಲಿ ಕಾಲೆಳೆದು ಸಾಕಾಗಿ ಹೋಯಿತು. ಹೇಗೂ ಮಧ್ಯಾಹ್ನ ಮಾಡಿದಳು. ಎತ್ತುಗಳನ್ನು ಬಿಚ್ಚಿ ತೊಳೆಯದೇ ಮೇಯಲು ಅಟ್ಟಿದಳು. "ಏನ್ರೀ ಊಟಕ್ಕೆ ಆಗಿದೆಯೇ" ಕೇಳಿದಳು. "ಆಗಿದೆ! ಬಡಿಸುತ್ತೇನೆ" ಎಂದು ಹೆಂಡತಿಗೆ ಊಟ ಬಡಿಸಿದ. ಅವಳಿಗೆ ಚೆನ್ನಾಗಿ ಹಸಿವೆಯಾಗಿತ್ತು. "ಪಲ್ಯ ಏನು ಮಾಡಿದಿರಿ?" ಎಂದು ಕೇಳುವುದನ್ನೇ ಮರೆತು ಮತ್ತೂ ಮತ್ತೂ ಹಾಕಿಸಿಕೊಂಡು ಊಟ ಮಾಡಿದಳು.

ಊಟ ಮಾಡಿ ಎದ್ದು, "ಕೈತೊಳೆಯಲು ನೀರೆಲ್ಲಿದೆ?" ಕೇಳಿದಳು. "ಬಾವಿಕಟ್ಟೆಯಲ್ಲಿದೆ" ಎಂದ ಗಂಡ. ಆಕೆ ಬಾವಿಕಟ್ಟೆಗೆ ಹೋದಳು. ಬಾವಿಕಟ್ಟೆಯಲ್ಲಿ ಖಾಲಿ ಕೊಡವಿದೆ. ನೀರು ಮೊಗೆಯೋಣ ಎಂದರೆ ಹಗ್ಗವೇ ಇಲ್ಲ. ಅಲ್ಲಿಂದಲೇ ರೇಗಿ "ಹಗ್ಗ ಎಲ್ಲಿದೇರಿ?" ಆರ್ಭಟಿಸಿದಳು. "ಏನೇ ಈಗ ಹಗ್ಗ ತಿಂದು ಹಗ್ಗ ಎಲ್ಲಿ ಕೇಳುತ್ತೀಯಾ?" ರೈತನೂ ರೇಗಿಯೇ ಉತ್ತರ ಕೊಟ್ಟ. ಹೀಗೆ ರೈತ ತನ್ನ ಹೆಂಡತಿಗೊಂದು ಪಾಠ ಕಲಿಸಿದ.

ಬಂಗರ ಚೌಟರ ಸುದ್ದಿ ನಿಂಗ್ಯಾಕ ಮಾಣಿ!
ನೀ ಒಮ್ಮೆ ಉಣ್ಣು ಮಾಣಿ!

ಒಬ್ಬಳು ಬ್ರಾಹ್ಮಣ ಹೆಂಗಸು ತನ್ನ ಗಂಡನಿಗೆ ತಿಳಿಯದಂತೆ ಮೀನು ತಿನ್ನುತ್ತಿದ್ದಳಂತೆ. ಮಕ್ಕಳಿಗೂ ತಿನ್ನಲು ಕೊಡುತ್ತಿದ್ದಳಂತೆ. ಒಮ್ಮೆ ಬಂಗುಡೆ ಮೀನನ್ನು ಕಾಯಿಸಿ ಊಟ ಮಾಡುತ್ತಿರುವಾಗ ಗಂಡ ಬರಬೇಕೆ? ತಾವು ಮೀನು ತಿನ್ನುತ್ತಿರುವುದು ಗಂಡನಿಗೆ ಗೊತ್ತಾದರೆ ಕತೆ ಕೆಟ್ಟೀತು ಎಂದು ಮೀನನ್ನು ಅಡಗಿಸಿಟ್ಟಳು.

ಆದರೆ ಅವಳ ಮಗು ಅಮ್ಮ ಮೀನು ಕೊಡದೆ ಇರುವುದನ್ನು ನೋಡಿ ಕುಸು ಕುಸು ಅನ್ನಲು ಆರಂಭಿಸಿತು. ಈಗ ಊಟ ಮಾಡುವಾಗ ಮೀನು ಏಕೆ ಕೊಡುವುದಿಲ್ಲವೆಂದು ತಾಯಿಯ ಮುಖ ನೋಡಿತು. ಮತ್ತೆ "ಅಮ್ಮ ಬಂಗಲೆ, ಅಮ್ಮ ಬಂಗಲೆ" ಎನ್ನತೊಡಗಿತು. ಅಯ್ಯೋ! ಇದು ಗಂಡನಿಗೆ ತಿಳಿದರೆ ಏನು ಮಾಡುವುದೆಂದು ತಿಳಿಯದ ಹೆಂಗಸು ಒಂದಿಷ್ಟು ಸಮಯ ಸ್ಫೂರ್ತಿಯಿಂದ, "ಹೌದಾ ಮಾಣಿ, ಬಂಗರ ಚೌಟರ ಸುದ್ದಿ ನಿಂಗ್ಯಾಕ ಮಾಣಿ, ನೀನು ಒಮ್ಮೆ ಉಣ್ಣು ಮಾಣಿ" ಎನ್ನುತ್ತಾ ಮಗುವನ್ನು ಸಮಾಧಾನ ಮಾಡುತ್ತಾ ಅಲ್ಲಿಂದ ಎತ್ತಿಕೊಂಡು ಹೋದಳಂತೆ!

ಅಣ್ಣನಿಗೆ ಶನಿವಾರ,
ಹೆಣ್ಣು ನಾಯಿಗೆ ಫಲಾಹಾರ, ಅತ್ತೆಗೆ ಪೆಟ್ಟೇ ಪೆಟ್ಟು

ಶನಿವಾರ, ಶುಕ್ರವಾರ, ಅಮಾವಾಸ್ಯೆ ಈ ದಿನಗಳಲ್ಲಿ ವ್ರತ ಹಿಡಿಯುವವರು ಇದ್ದಾರೆ. ವ್ರತ ಹಿಡಿಯುವವರಿಗೆ ಊಟವಿಲ್ಲ, ಫಲಾಹಾರ ಮಾತ್ರ.

ಗಂಡನಿಗೆ ಶನಿವಾರ ವ್ರತವಿತ್ತು. ಫಲಾಹಾರಕ್ಕೆ ಬೇಕಾದುದನ್ನೆಲ್ಲ ಮಾಡಿಟ್ಟು ಹೆಂಡತಿ ಆಚೆ ಮನೆಗೆ ಹೋಗಿ ಪಟ್ಟಾಂಗಕ್ಕೆ ಕುಳಿತಿದ್ದಳು. ಇಲ್ಲಿ ಅಡಿಗೆ ಮನೆ ಬಾಗಿಲು ದೂಡಿಕೊಂಡು ಒಂದು ಹೆಣ್ಣು ನಾಯಿ ಬಂದು ಫಲಾಹಾರಕ್ಕೆ ಇಟ್ಟಿರುವ ಎಲ್ಲವನ್ನು ತಿಂದು, ತಟ್ಟೆ ಇತ್ಯಾದಿಯನ್ನು ಕವುಚಿ ಹಾಕಿ ಹೋಯಿತು.

ಅಷ್ಟಾಗುವಾಗ ಗಂಡ ಸ್ನಾನಮಾಡಿ ಒಳಗೆ ಬಂದ. ಬರುವಾಗ ಫಲಾಹಾರ ಖಾಲಿಯಾಗಿದೆ. ಮನೆಯಲ್ಲಿ ಅತ್ತೆ ಮಾತ್ರವಲ್ಲದೆ ಬೇರೆ ಯಾರೂ ಇರಲಿಲ್ಲ. ಅಳಿಯನಿಗೆ ಮೊದಲೇ ಅತ್ತೆಯೆಂದರೆ ಕೋಪ. ಇಟ್ಟಿದ್ದ ಫಲಾಹಾರವನ್ನು ತನ್ನ ಅತ್ತೆಯೇ ತಿಂದಿರಬೇಕೆಂದು ಆತ ಯೋಚಿಸಿದ. ಹೆಂಡತಿ ಮನೆಯಲ್ಲಿರದಿರುವುದೂ ಅವನಿಗೆ ಕೋಪ ತರಿಸಿತ್ತು. ಹಾಗಾಗಿ ಹೆಂಡತಿಯ ಮೇಲಿನ ಕೋಪವನ್ನು ಅತ್ತೆಯ ಮೇಲೆ ತೋರಿಸಿದ. ಫಲಾಹಾರ ತಿಂದಳೆಂದು ಅತ್ತೆಗೆ ಸರಿಯಾಗಿ ಪೆಟ್ಟು ಬಿತ್ತು. ಬೇರೆ ಗತಿಯಿಲ್ಲದ, ಬೇರೆ ತನ್ನವರಾರೂ ಇಲ್ಲದ ಪಾಪದ ಅತ್ತೆ ಹೇಗೂ ಅಳಿಯನ ಹಂಗಿನಲ್ಲಿತ್ತು. ಅಳಿಯನ ಫಲಾಹಾರ ಅತ್ತೆಗೆ ಸಿಕ್ಕಿತು!

ಬಹುಶಃ ತಂಗಿ ಅಣ್ಣನ ವ್ರತವನ್ನು ಕಂಡು ಈ ನುಡಿಕಟ್ಟು ಕಟ್ಟಿರಬೇಕು: "ಅಣ್ಣನಿಗೆ ಶನಿವಾರ, ಬೊಗ್ಗಿ (ಹೆಣ್ಣುನಾಯಿ)ಗೆ ಫಲಾಹಾರ, ಅತ್ತೆಗೆ ಪೆಟ್ಟೇ ಪೆಟ್ಟು!"

ವೈದ್ಯರ ಕೈಗುಣ

ಹೆಂಡತಿ ತಡೆಯಲಾರದ ನೋವು, ಸಂಕಟದಿಂದ ನರಳುತ್ತಿದ್ದಳು. ಮದ್ದು ತರಲೆಂದು ವೈದ್ಯರ ಹತ್ತಿರ ಓಡಿದ ಮಂಜಪ್ಪಣ್ಣ. ಆದರೆ ಆ ಹೊತ್ತಿಗೆ ವೈದ್ಯರು ಮನೆಯಿಂದ ಹೊರಟು ಎಲ್ಲಿಗೋ ಹೋಗಿಯಾಗಿತ್ತು. ಮಂಜಪ್ಪಣ್ಣ ಆ ಮನೆಯವರೊಡನೆ ಕೇಳಿ, ಎತ್ತ ಹೋಗಿರುವರೆಂದು ತಿಳಿದು ಆ ಕಡೆಗೆ ಹೋದ. ಆದರೆ ಅವರನ್ನು ಪಲ್ಲಕ್ಕಿಯಲ್ಲಿ ಹೊತ್ತು ಕೊಂಡು ಹೋಗುತ್ತಿದ್ದರು. ಅವರಿಗೆ ಎರಡೂ ಕಾಲುಗಳಿರಲಿಲ್ಲ.

ಮಂಜಪ್ಪಣ್ಣ ವೈದ್ಯರ ಕೈ ಹಿಡಿದು, ತನ್ನ ಹೆಂಡತಿಯನ್ನು ನೋವಿನಿಂದ ಪಾರು ಮಾಡಬೇಕೆಂದು ಬೇಡಿಕೊಂಡ. ವೈದ್ಯರಿಗೆ ಧರ್ಮಸಂಕಟ. ಮದ್ದಿನ ಗಂಟಾಗಲೀ, ಚೂರ್ಣವಾಗಲೀ ಅವರ ಕೈಯಲ್ಲಿ ಇಲ್ಲ. ಎಲ್ಲವನ್ನೂ ಮನೆಯಲ್ಲಿ ಬಿಟ್ಟು ಬಂದಿದ್ದಾರೆ. ಆದರೆ ತನ್ನನ್ನೇ ನಂಬಿದವನಿಗೆ ಹೇಗೆ ಇಲ್ಲವೆಂದು ಹೇಳುವುದು! ಇಲ್ಲವೆಂದು ಹೇಳಿದರೂ ಈ ಮಂಜಪ್ಪಣ್ಣ ಕೇಳುವವನಲ್ಲ. ಅವನಿಗೆ ವೈದ್ಯರೆಂದರೆ ದೇವರೇ.

ಪಂಡಿತರು ಕುಳಿತಲ್ಲಿಯೇ ಒಂದಿಷ್ಟು ಆಲೋಚನೆ ಮಾಡಿದರು. ತನ್ನ ತೋಳುಗಳನ್ನು ಅಂಗೈಯಲ್ಲಿ ಉಜ್ಜಿದರು. ಉಜ್ಜಿ ಉಜ್ಜಿದಾಗ ಕೊಳೆ-ಬೆವರು ಸೇರಿದ ಕಪ್ಪು ಪದರ ಕೈಗೆ ಬಂತು. ಅದನ್ನೇ ಉಂಡೆಯಂತೆ ಉಜ್ಜಿ, ಮಾತ್ರೆಯಂತೆ ಮಾಡಿದರು. ಅದನ್ನೇ ಮಂಜಪ್ಪಣ್ಣನಿಗೆ ಕೊಟ್ಟು ತುಳಸಿ ಎಲೆಯ ರಸದಲ್ಲಿ ಈ ಮಾತ್ರೆ ತೆಗೆದುಕೊಳ್ಳಬೇಕೆಂದು ಹೇಳಿ, ಪತ್ಯಗಳನ್ನೂ ಹೇಳಿದರು. ರೋಗ ವಾಸಿಯಾಗಲು ಮದ್ದಿನೊಡನೆ ಕೈಗುಣವೂ ಬೇಕಲ್ಲವೆ?

ಮನುಷ್ಯನಿಗಿಂತ ದೊಡ್ಡ ಭೂತವಿದೆಯೆ?

ನಾಲ್ಕೈದು ಮಂದಿ ಒಟ್ಟಿಗೆ ಸೇರಿದರೆ ತಮಾಷೆ, ಕತೆ, ಪಟ್ಟಾಂಗ–ಪಂಚಾತಿಕೆ ಮಾತನಾಡುತ್ತಾರೆ, ಹಾಗೆಯೇ ಅವರವರ ಜಾಣತನವನ್ನು ತೋರಿಸುವ ಪಂಥ–ಪರಾಕ್ರಮಗಳನ್ನೂ ಹಾಕಿಕೊಳ್ಳುವುದಿದೆ.

ಒಮ್ಮೆ ಹೀಗೆಯೇ ಒಂದು ಯುವಕರ ಕೂಟದಲ್ಲಿ ಒಂದು ಸವಾಲು ಹುಟ್ಟಿಕೊಂಡಿತು. "ಸ್ಮಶಾನದಲ್ಲಿ ಅಥವಾ ಹೆಣ ಸುಡುವ ಗದ್ದೆಯಲ್ಲಿ ಹೆಣ ಸುಟ್ಟ ಜಾಗದಲ್ಲಿ ನಟ್ಟಿರುಳಿನ ಹೊತ್ತಿಗೆ ಯಾರು ಮಲಗಬಲ್ಲರು?" ಇದನ್ನು ಕೇಳಿದ ಒಬ್ಬ ಯುವಕ ಎದ್ದು ನಿಂತ– "ನಾನು ಈ ಸವಾಲಿಗೆ ತಯಾರಿದ್ದೇನೆ."

ಆ ಯುವಕ ಬಹಳ ಧೈರ್ಯವಂತ. ಆ ರಾತ್ರಿ ಪಂಥ ಪೂರೈಸಲೆಂದು ಹೊರಟ. ಸ್ಮಶಾನಕ್ಕೆ ಹೋದ. ನಿನ್ನೆ ಉರಿಸಿದ ಚಿತೆಯಲ್ಲಿ ಬೆಂಕಿಯಿನ್ನೂ ಆರಿಲ್ಲ. ಕೊಳ್ಳಿಯ ಕಿಡಿ ಏಳುತ್ತಿದೆ. ಆ ಕಡೆ ಈ ಕಡೆ ಹಿಂದಿನ ಗೋರಿಗಳು. ನಾಲ್ಕು ಕಡೆಯೂ ಗಾಢ ಕತ್ತಲೆ ಆವರಿಸಿದೆ. ಆದರೆ ಏನೂ ಹೆದರಿಕೆಯಿಲ್ಲ ಆತ ಒಬ್ಬನೇ ಮಲಗಿದ.

ಚಿತೆ ಜಾರುವ ಶಬ್ದ, ಚಿತೆಯ ಕೊಳ್ಳಿಗಳಿಂದ ಕಿಡಿ ಹಾರುವ ಶಬ್ದವಲ್ಲದೆ ಬೇರೆ ಶಬ್ದಗಳೇನೂ ಕೇಳುತ್ತಿಲ್ಲ. ದೂರದಲ್ಲಿ ನಾಯಿ ಬೊಗಳುವುದು ಕೇಳಿಸುತ್ತಿದೆ.

ನಟ್ಟ ನಡು ಇರುಳು ಕಳೆದಿರಬೇಕು. ನಾಲ್ಕು ದಿಕ್ಕಿನಿಂದಲೂ ಒಮ್ಮೆಲೇ ಕಿರುಚಾಟ! ಮಲಗಿದ್ದ ಯುವಕ ಒಮ್ಮೆಲೆ ದಿಗ್ಭ್ರಮೆಗೊಂಡ. ಯಾವುದೋ ಕಡೆಯಿಂದ ಒಮ್ಮೆಲೆ ಕುತ್ತಿಗೆ ಅಮುಕಿದ ಅನುಭವ. ತೋಳು ಎಳೆದು ಹಾಕಿದವು ಗಂಡಗಣಗಳು! ಯುವಕ 'ಅಯ್ಯೋಯ್ಯಪ್ಪಾ' ಎಂದು ಬೊಬ್ಬೆ ಹೊಡೆದ. ಮತ್ತೆ ಸ್ಮೃತಿ ತಪ್ಪಿ ಬಿದ್ದ.

ಪಂಥ ಹಾಕಿದ ಯುವಕನನ್ನು ಸೋಲಿಸಬೇಕೆಂದು ಮಸಣದ ಚಿತೆಯ ಪಕ್ಕದಲ್ಲೇ ಮೊದಲೇ ಅಡಗಿ ಕುಳಿತಿದ್ದ ಸಂಗಡಿಗರ ಬಗ್ಗೆ ಯುವಕನಿಗೆ ತಿಳಿದಿರಲಿಲ್ಲ. ಏನೂ ಹೆದರಿಕೆ ಇಲ್ಲದವರಿಗೂ ಗರ್ಭದಲ್ಲೇ ಹೆದರಿಕೆ ಹುಟ್ಟುವಂತೆ ಮಾಡುವವರಿದ್ದಾರೆ. ಭೂತ, ಪ್ರೇತ, ಪಿಶಾಚಿ ಬೇರೇನೂ ಅಲ್ಲ, ನಮ್ಮ ಜೊತೆಗೆ ಇರುವ ಮನುಷ್ಯರೇ ದೊಡ್ಡ ಪಿಶಾಚಿಗಳು. ನಮ್ಮ ಮನಸ್ಸಿನ ಹೆದರಿಕೆಯೇ ಎಲ್ಲಕ್ಕಿಂತ ದೊಡ್ಡ ಭೂತ.

ಊಟವಾದ ಕೂಡಲೇ ಮಲಗಬೇಕು,
ಎದ್ದ ಕೂಡಲೇ ಊಟ ಮಾಡಬೇಕು!

ಒಮ್ಮೆ ಒಂದು ಮನೆಗೆ ವಿವಾಹ ಸಂಬಂಧ ಮಾತನಾಡಲೆಂದು ಬಂದಿದ್ದರು. ಮದುವೆಗೆ ತಯಾರಾದ ಕನ್ಯೆಯಿರುವ ಮನೆಗೆ ಹೀಗೆ ನೆಂಟರು ಬಂದರೆ ಮನೆಯವರಿಗೆ ಮೊದಲೇ ತಿಳಿಯುತ್ತದೆ. ಬಂದ ನೆಂಟರಿಗೆ ಸತ್ಕಾರವಾಯಿತು. ಬಂದವರು ಬಂದ ವಿಷಯ ತಿಳಿಸಿದರು. ಹುಡುಗನ ಮತ್ತು ಹುಡುಗಿಯ ಬಳಿ (ಗೋತ್ರ) ತಿಳಿದುಕೊಂಡರು. ಒಂದಕ್ಕೊಂದು ಸರಿ ಬರುತ್ತದೆಂದಾಯಿತು. "ನಿಮಗೆ ಮನಸ್ಸಿದ್ದರೆ ಹೆಣ್ಣನ್ನು ತೋರಿಸಬಹುದು", ಎಂದರು ಹುಡುಗನ ಕಡೆಯವರು.

ಒಳಗಿನ ಬಾಗಿಲ ಸಂದಿನಲ್ಲಿ ನಿಂತು ಕಿವಿಗೊಡುತ್ತಿದ್ದ ಹೆಣ್ಣಿಗೆ ರೋಮಾಂಚನವಾಯಿತು. ಒಡಲ ಉಸಿರಿನ ಸ್ವರ ಜೋರಾದಂತಾಯಿತು.

ಹೆಣ್ಣನ್ನು ಸಿಂಗರಿಸಿದರು. ಕೈಯಲ್ಲಿ ಕೊಡಪಾನ ಕೊಟ್ಟು ನೀರಿಗೆ ಕಳುಹಿಸಿದರು. ಬಂದವರು ಒಳಗಿನಿಂದ ಹೊರಟ ಹೆಣ್ಣಿನ ರೂಪ, ನಡಿಗೆಯನ್ನು ನೋಡಿದರು. ಹೆಣ್ಣು ನಾಚಿ ನೀರಾದಳು. ಹೆಣ್ಣು ಒಪ್ಪಿತವೆಂದಾಯಿತು. ಹೆಣ್ಣಿನ ಕಡೆಯವರು ಗಂಡನ್ನು ಒಪ್ಪಿದೆವೆಂದರು.

ನಮ್ಮ ಗಂಡು ಹೀಗೆ, ನಿಮ್ಮ ಹೆಣ್ಣು ಹೇಗೆ?– ನೆಂಟರು ಕೇಳಿದರು.

"ನಮ್ಮ ಹೆಣ್ಣು ರೂಪ ನಡಿಗೆಯಲ್ಲಿ ಏನೂ ದೋಷವಿದ್ದವಳಲ್ಲ. ಅವಳ ಗುಣದಲ್ಲೂ ಯಾವುದೇ ದೋಷವಿಲ್ಲ. ಆದರೆ ಅವಳ ಅಭ್ಯಾಸವೊಂದನ್ನು ನಿಮಗೆ ಹೇಳಲೇಬೇಕು. ಅವಳಿಗೆ ಊಟವಾದ ಕೂಡಲೇ ಸ್ವಲ್ಪ ನಿದ್ದೆ ಮಾಡಬೇಕು. ಎದ್ದ ಕೂಡಲೇ ಒಂದಿಷ್ಟು ಉಣ್ಣಬೇಕು. ಹಾಗೆಯೇ ಊಟವಾದ ಕೂಡಲೇ ಮಲಗಬೇಕು."

ಬಂದ ನೆಂಟರಿಗೆ ಇದು ದೊಡ್ಡ ವಿಷಯವೆಂದು ಅನ್ನಿಸಲಿಲ್ಲ. "ಅಷ್ಟೇ ಅಲ್ಲವೆ? ಮನುಷ್ಯನಾದವನಿಗೆ

ಹೊಟ್ಟೆ ಹಸಿವು ಆಗುತ್ತದೆ, ಕಣ್ಣಿಗೆ ನಿದ್ದೆಯೂ ಬರುತ್ತದೆ. ಇದು ಕೆಟ್ಟ ಅಭ್ಯಾಸವೇನೂ ಅಲ್ಲ" ಹೆಣ್ಣು ಒಪ್ಪಿತವಾದುದರಿಂದ ಹೀಗೆಂದರು ಅವರು.

ಮದುವೆಗೆ ದಿನ ನಿಶ್ಚಯವಾಯಿತು. ಮದುವೆಯೂ ಆಯಿತು. ಹೆಣ್ಣನ್ನು ಗಂಡಿನ ಮನೆಗೆ ಕಳುಹಿಸಿಕೊಟ್ಟರು. ಬಂದ ಹೆಣ್ಣು ಒಂದು ಕಡೆ ಮಾತಿಲ್ಲದೆ ಮಲಗಿದಳು. ಅತ್ತೆ, ಅತ್ತಿಗೆ, ನಾದಿನಿಯರು ಊಟಕ್ಕೆಂದು ಮದುಮಗಳನ್ನು ಎಬ್ಬಿಸಿದರು. ಮದುಮಗಳು ಎದ್ದು ಬಂದು ಬಡಿಸಿದ್ದನ್ನು ಚೆನ್ನಾಗಿ ಊಟ ಮಾಡಿದಳು. ಊಟವಾದ ಕೂಡಲೇ ಹೋಗಿ ಮಲಗಿದಳು.

"ಪಾಪ ಹೊಸ ಜಾಗ, ಹೊಸ ಜನಗಳು. ಬೇಸರಗೊಂಡಿದ್ದಾಳು ಹೆಣ್ಣು. ನಾಳೆ ನಾಡಿದ್ದಿನಲ್ಲಿ ಸರಿಯಾದೀತು" ಎಂದುಕೊಂಡರು ಮನೆಯವರು.

ಆದರೆ ಈ ಹೆಣ್ಣು ಮಾತ್ರ ತನ್ನ ಅಭ್ಯಾಸವನ್ನು ಬಿಡಲಿಲ್ಲ. ಊಟ ಮಾಡುವುದು, ಮಲಗುವುದು ಇದು ಕಾಯಮ್ಮಾಗಿ ಹೋಯಿತು. ಆದರೂ ಗಂಡ, ಅತ್ತೆ, ಮಾವ –ಇನ್ನು ಸ್ವಲ್ಪ ದಿನದಲ್ಲಿ ಸರಿಯಾದಾಳು, ತಾಯಿ ಮನೆ ಬಿಟ್ಟ ಬೇಸರ ಕಡಿಮೆಯಾಗಲಿ ಎಂದು ಕಾಯುತ್ತಲೇ ಇದ್ದರು. ಹೆಣ್ಣಿನ ಈ ಅಭ್ಯಾಸ ನಿಲ್ಲಲೇ ಇಲ್ಲ. ಈಗ ಮಾತ್ರ ಗಂಡಿನ ಮನೆಯವರೆಲ್ಲರಿಗೂ ಉಸಿರುಕಟ್ಟಿದ ಅನುಭವವಾಯಿತು. ಹೆಣ್ಣಿನ ಅಭ್ಯಾಸ ನಿಲ್ಲುವ ಲಕ್ಷಣವೇ ಇಲ್ಲ. ಗಂಡನಿಗಂತೂ 'ಇಂಥಾ ಹೆಣ್ಣನ್ನೇಕೆ ಕಟ್ಟಿಕೊಂಡೆ' ಎಂದು ಅನ್ನಿಸತೊಡಗಿತು. ಮಲಗಿದ್ದವಳನ್ನು ಎಬ್ಬಿಸಿದರೆ ಊಟ ಕೇಳುತ್ತಾಳೆ. ಊಟವಾದ ಕೂಡಲೆ ಮತ್ತೆ ಮಲಗಿಬಿಡುತ್ತಾಳೆ. ನಡು ಇರುಳಲ್ಲಿ ಊಟ ಕೊಟ್ರೂ ಪ್ರಯೋಜನವಾಗಲಿಲ್ಲ. ಮತ್ತೆ ಹಾಸಿಗೆ ಮೂಸುವವಳವಳು.

ಕೋಪದಲ್ಲೇ ಅತ್ತೆ ಮಾವಂದಿರನ್ನು ಕರೆತರಿಸಿದ ಗಂಡ. "ನೀವು ಇಂತಹ ಹೆಣ್ಣನ್ನು ನನ್ನ ಕುತ್ತಿಗೆಗೆ ಕಟ್ಟಿದ್ದೇಕೆ? ನನಗೆ ಈ ಹೆಣ್ಣು ಬೇಡ! ಒಳ್ಳೆ ಮಾತಿನಲ್ಲಿ ಅವಳನ್ನು ಕರೆದೊಯ್ಯಿರಿ" ಎಂದ. ಹೆಣ್ಣು ಕೊಟ್ಟವರು ಸುಮ್ಮನೆ ಬಿಡುವವರೆ? "ನಾವು ಮೊದಲೇ ಅವಳ ಅಭ್ಯಾಸವನ್ನು ನಿಮಗೆ ಹೇಳಿದ್ದೆವು. ನೀವು ಒಪ್ಪಿಯೇ ಮದುವೆ ಆಗಿರುವುದು. ತಪ್ಪು ನಿಮ್ಮದೇ?" ಎಂದರು ಅವರು.

ಬಹಳ ಆಲೋಚನೆ ಮಾಡಿದ ಬಳಿಕ ಹೆಣ್ಣಿನ ತಂದೆ ಅಳಿಯನನ್ನು ಪಕ್ಕಕ್ಕೆ ಕರೆದು, "ಈಗ ಆಗಿರುವುದು ಆಗಿ ಹೋಗಿದೆ. ಹೆಚ್ಚು ಮಾತನಾಡಿ ಫಲವಿಲ್ಲ. ಹೇಗಾದರೂ ಅವಳ ಅಭ್ಯಾಸವನ್ನು ನಿಲ್ಲಿಸಬೇಕು" ಎಂದರು. "ಆದರೆ ಹೇಗೆ?" ಎಂದು ಪ್ರಶ್ನಿಸಿದ ಅಳಿಯ.

"ಬಹಳ ಸುಲಭ. ಹೇಗಾದರೂ ಅವಳಿಗೊಂದು ಮಗು ಆಗುವ ಹಾಗೆ ಮಾಡು. ಮತ್ತೆ ನೋಡಿಕೊಳ್ಳುವಾ" ಎಂದ ಮಾವ. ಮಾವನ ಸಲಹೆಯಂತೆ ನಡೆದುಕೊಂಡ ಅಳಿಯ ಮಗುವೊಂದರ ಹುಟ್ಟಿಗೆ ಕಾರಣನಾದ. ಈ ಮಗುವಿನ ಅರಚಾಟ, ಕಿರುಚಾಟದಲ್ಲಿ ಹೆಣ್ಣಿನ ಊಟವಾದ ಕೂಡಲೇ ಮಲಗುವ, ಎದ್ದ ಕೂಡಲೇ ಊಟ ಮಾಡುವ ಅಭ್ಯಾಸ ತನ್ನಷ್ಟಕ್ಕೆ ನಿಂತು ಹೋಯಿತು. ಹೇಗಿದೆ ಉಪಾಯ?

ಸಮಾರಂಭದಲ್ಲಿ ತೋರಿಸಿದ ಆಭರಣಗಳು

ತಾಯಿ, ಮಗಳು ಮತ್ತು ಮಗ ಒಂದು ಸಮಾರಂಭಕ್ಕೆ ಹೊರಟರು. ತಾಯಿಯ ಕಿವಿಯಲ್ಲಿ ಹೊಸ ಓಲೆ. ಮಗಳ ಮೂಗಿನಲ್ಲಿ ಹೊಸ ಮೂಗುತಿ, ಮಗನ ಬೆರಳಿನಲ್ಲಿ ಹೊಸ ಉಂಗುರ. ಅಂತೂ ಇವನ್ನೆಲ್ಲ ಧರಿಸಿಕೊಂಡು ಹೊರಟರು.

ಎದುರು ಸಿಕ್ಕಿದವರಾಗಲೀ, ಸಭೆಯಲ್ಲಿ ಕುಳಿತಿದ್ದವರಾಗಲೀ ಯಾರೂ ಇವರ ಹೊಸ ಆಭರಣಗಳ ಕುರಿತು ವಿಚಾರಿಸಲಿಲ್ಲ. "ಅದರಲ್ಲಿ ಎಷ್ಟು ಪವನು ಇದೆ? ಇದು ಚೆನ್ನಾಗಿ ಒಪ್ಪುತ್ತದೆ, ಅದೂ ಚೆನ್ನಾಗಿದೆ" ಹೀಗೆಲ್ಲಾ ಯಾರೂ ಏನೂ ಅವರನ್ನು ಮಾತನಾಡಿಸಲಿಲ್ಲ, ಹೇಳಲಿಲ್ಲ. ಕೇಳಲಿಲ್ಲ.

ಇನ್ನು ಊಟಕ್ಕೆ ಕುಳಿತಾಗಲಾದರೂ ಯಾರಾದರೂ ಕೇಳದಿರಲಾರರು ಎಂದು ಕಾದರು ಅವರು. ಆದರೆ ನೋಡಿದ ಮನುಷ್ಯರಿಲ್ಲ, ಕೇಳಿದ ಮನುಷ್ಯರೂ ಇಲ್ಲ. ತಮ್ಮ ಹೊಸ ಆಭರಣಗಳನ್ನು ಹೇಗಾದರೂ ಬಂದವರಿಗೆ ತಿಳಿಸಬೇಕೆಂಬ, ತೋರಿಸಬೇಕೆಂಬ ಬಯಕೆ ಅವರದು.

ಊಟಕ್ಕೆ ಎಲ್ಲರೂ ಪಂಕ್ತಿಯಲ್ಲಿ ಕುಳಿತಿದ್ದಾರೆ. ಎಲೆ ಹಾಕಿದರು, ನೀರು ಹಾಕಿದರು. ಅನ್ನ, ಮೇಲೋಗರ ಬಡಿಸಿದರು. ಅಷ್ಟಾಗುವಾಗ ಮತ್ತೆ ಎರಡನೇ ಬಾರಿಗೆ ಅನ್ನ ಬಡಿಸಲು ಬಂದರು. ಆಗ ಆಭರಣ ಹಾಕಿಕೊಂಡ ತಾಯಿ "ನನಗೆ ಬೇಡ, ನನಗೆ ಬೇಡ" ಎಂದು ತಲೆಯಾಡಿಸುತ್ತಾ ಹೇಳಿದಳು. ಅವಳ ಕಿವಿಗಳೂ ಅಲುಗತೊಡಗಿದುವು. ಈಗ ಅವಳ ಕಿವಿಗಳನ್ನು ನೋಡದೆ ಇರುವರೆ ಹತ್ತಿರ ಕುಳಿತಿರುವವರು? ಮಗಳ ಹತ್ತಿರ ಬರುವಾಗ "ಅದೇನು? ಅದೇನು?" ಎಂದು ಮೂಸಿ ಮೂಸಿ ನೋಡುತ್ತಾ ಕೇಳಿದಳು. ಹೀಗಿರುವಾಗ ಅವಳ ಹೊಸ ಮೂಗುತಿ ಉಳಿದವರ ಕಣ್ಣಿಗೆ ಕಾಣದಿರುವುದೆ? ಮಗನ ಹತ್ತಿರ ಬಡಿಸಲು ಬಂದಾಗ ಅವನು, "ಇಲ್ಲಿಗೇ ಬಡಿಸಿ, ಇಲ್ಲಿಗೇ ಬಡಿಸಿ" ಎಂದು ಬೆರಳನ್ನು ತೋರಿಸಿ, ತೋರಿಸಿ ಹೇಳಿದ. ಅವನ ಬೆರಳು, ಜೊತೆಗೆ ಬೆರಳಿನ ಉಂಗುರ ಜನ ನೋಡದಿರುವರೆ?

ಯಾರು ನೋಡಿದರೋ, ಯಾರು ಕೇಳಿದರೋ? ಅದನ್ನು ನೀವು ಹೇಳಬೇಕು. ನನಗೂ ಒಮ್ಮೆ ಆ ಸಂಗತಿಯನ್ನು ನೀವೇ ಹೇಳಬೇಕು.

ಅಗಸನ ಕೈ ಶುದ್ಧ, ಬ್ರಾಹ್ಮಣನ ಬಾಯಿ ಶುದ್ಧ

ಒಮ್ಮೆ ದೇವರು ಬ್ರಾಹ್ಮಣನ ರೂಪದಲ್ಲಿ ತನ್ನ ಕೂಚಿಯಿಂದ ತೀರ್ಥ ಕೊಡುತ್ತಿದ್ದರು. ತಲೆಯಲ್ಲಿ ಮಡಿ ಬಟ್ಟೆಯ ಹೊರೆಯನ್ನು ಹೊತ್ತುಕೊಂಡಿದ್ದ ಅಗಸನೂ ತೀರ್ಥಕ್ಕೆ ಕೈ ನೀಡಿದ. ಆದರೆ ತೀರ್ಥವನ್ನು ಅವನಿಗೆ ಕುಡಿಯಲು ಆಗಲಿಲ್ಲ. ಕುಡಿಯುವಾಗ ತಲೆಯ ಮೇಲಿನ ಹೊರೆ ಕೆಳಗೆ ಬಿದ್ದು ಹೋದೀತೆಂದು ಅವನ ಎಣಿಕೆ. ಹಾಗಾಗಿ ತೀರ್ಥವನ್ನು ಕೈಯಲ್ಲೇ ಇಟ್ಟುಕೊಂಡು ನಿಂತ.

ಅದೇ ಹೊತ್ತಿಗೆ ಒಬ್ಬ ಬ್ರಾಹ್ಮಣನೂ ತೀರ್ಥ ತೆಗೆದುಕೊಂಡ. ಬ್ರಾಹ್ಮಣ ತೆಗೆದುಕೊಂಡ ತೀರ್ಥವನ್ನು ಬಾಯಗಲಿಸಿ ಕುಡಿದ. ತೀರ್ಥವನ್ನು ಕೈಯಲ್ಲೇ ಹಿಡಿದು ನಿಂತ ಅಗಸನನ್ನು ನೋಡಿ ದೇವರು 'ನಿನ್ನ ಕೈ ಶುದ್ಧ' ಎಂದು ಹೇಳಿದರು. ತೀರ್ಥವನ್ನು ಕುಡಿದ ಬ್ರಾಹ್ಮಣನನ್ನು ನೋಡಿ, 'ನಿನ್ನ ಬಾಯಿ ಶುದ್ಧ' ಎಂದು ಹೇಳಿದರು. ಹೀಗೆ ಇಬ್ಬರಿಗೂ ದೇವರು ವರ ಕೊಟ್ಟು ಹೋದರಂತೆ.

ಹಾಗಾಗಿ ಅಗಸನ ಕೈ ಶುದ್ಧವಂತೆ, ಬ್ರಾಹ್ಮಣನ ಬಾಯಿ ಶುದ್ಧವಂತೆ. ಅಗಸ ಮಾಡಿದ ಕೆಲಸ ಶುದ್ಧವಾದರೆ, ಬ್ರಾಹ್ಮಣ ಹೇಳಿದ ಮಾತು, ಪಠಿಸಿದ ಮಂತ್ರ ಶುದ್ಧವೆಂದು ಇದರಿಂದ ತಿಳಿಯಬೇಕು.

ಎತ್ತಿನ ಗಾಡಿಯಲ್ಲಿ ಹೆಣ್ಣಿನ ವೇಷ

ನಂದಾವರ ಎಂಬ ಊರಿನಲ್ಲಿ ಚಂದ್ರ ರಾಜ ಎಂಬವರು ಭಾರೀ ದೊಡ್ಡ ಕಿಲಾಡಿಯಾಗಿದ್ದರಂತೆ. ದೊಡ್ಡ ರೌಡಿಯೂ ಆಗಿದ್ದರಂತೆ. ಹಾಗಾಗಿ ಊರಿನವರಲ್ಲಿ ಕೆಲವರೊಡನೆ ಮನಸ್ತಾಪವನ್ನೂ ಕಟ್ಟಿಕೊಂಡಿದ್ದರು. ಒಮ್ಮೆ ಏನೋ ಜಗಳವಾಗಿ ಅವರು ಬಂಗಾಡಿ ಎಂಬ ಊರಿನಲ್ಲಿ ಅಡಗಿ ಕುಳಿತಿರಬೇಕಾಯಿತು.

ಈ ಹೊತ್ತಿನಲ್ಲಿ ಅವರನ್ನು ಹೆತ್ತ ತಾಯಿಯ ಮರಣದ ವಾರ್ತೆ ಚಂದ್ರರಾಜರಿಗೆ ತಲುಪಿತು. ಕ್ರಿಯಾಕರ್ಮಗಳನ್ನು ನಡೆಸಲು ಅವರು ಊರಿಗೆ ಹಿಂದಿರುಗಲೇ ಬೇಕಿತ್ತು. ಆದರೆ ಗಾಡಿ ಹೋಗುವ ದಾರಿಯಲ್ಲಿ ಹಗೆಗಳು ಕಾದಿರುತ್ತಾರೆ. ಏನು ಮಾಡುವುದು?

ಚಂದ್ರರಾಜರ ಬಲಗೈ ಬಂಟ ಅಪ್ಪಯ್ಯ ಎಂಬವನು ಹೇಗಾದರೂ ಬಂಗಾಡಿಗೆ ಹೋಗಿ ಚಂದ್ರರಾಜರನ್ನು ಗಾಡಿಯಲ್ಲಿ ಊರಿಗೆ ಕರೆತಂದ. ಪೂಂಜಾಲಕಟ್ಟೆಯ ಬಳಿ ಬರುವಾಗ ಹಗೆಗಳು ಗಾಡಿಯನ್ನು ನಿಲ್ಲಿಸಿಟ್ಟರು. ಗಾಡಿಯನ್ನು ಜಪ್ತಿ ಮಾಡುತ್ತೇವೆಂದರು. ಆದರೆ ಗಾಡಿಯೊಳಗೆ ಹೆಂಗಸೊಬ್ಬರನ್ನು ನೋಡಿ, ತಡ ಮಾಡದೆ ಹೋಗಲು ಬಿಟ್ಟರು. ಚಂದ್ರರಾಜ ಶೆಟ್ಟರಿಗೆ ಹೆಣ್ಣಿನ ವೇಷ ಹಾಕಿಸಿ, ಅಪ್ಪಯ್ಯ ಗಾಡಿಯಲ್ಲಿ ಕರೆತಂದಿರುವುದು ಹಗೆಯರಿಗೆ ತಿಳಿಯದೇ ಹೋಯಿತು.



ಮಂತ್ರವಾದಿ ಮಾದಪ್ಪಯ್ಯರು ಮತ್ತು ಬ್ರಹ್ಮರಾಕ್ಷಸ

ನಂದಾವರದ ಕೆಳಗಿನಮನೆಯಲ್ಲಿ ಬಟ್ಯ ಎಂಬಾತನೊಬ್ಬನಿದ್ದ. ಒಮ್ಮೆ ಆತ ಪೇಟೆಗೆ ಹೋಗಿ ಬರುವಾಗ ದಾರಿಯಲ್ಲಿ ಒಂದು ಕೋಳಿ, ಒಂದು ನಾಯಿ ಮತ್ತು ಒಂದು ಕೋಣ, ಕೊನೆಗೆ ಒಬ್ಬ ಮನುಷ್ಯ ಕಂಡಂತೆ ಆಯಿತು. ಮನುಷ್ಯ ಮನುಷ್ಯಾಕಾರದಲ್ಲಿದ್ದವನು ನೋಡು ನೋಡುತ್ತಿರುವಂತೆಯೇ ದೊಡ್ಡದಾಗತೊಡಗಿದ. ಆತನ ನಾಲ್ಕು ಕೈಗಳಲ್ಲಿ ನಾಲ್ಕು ದೀವಟಿಗೆಗಳೂ ಕಂಡವು. ಇದನ್ನು ನೋಡಿ ಬಂದ ಬಟ್ಯ ಜ್ವರದಲ್ಲಿ ಮಲಗಿದ. ಹೀಗೆ ಮಲಗಿದವನು ಮತ್ತೆ ಏಳಲೇ ಇಲ್ಲ.

ಈ ಸುದ್ದಿ ಆ ಊರಿನ ಮಾದಪ್ಪಯ್ಯನವರಿಗೆ ತಿಳಿಯಿತು. ಅವರು ಬಹಳ ದೊಡ್ಡ ಮಂತ್ರವಾದಿ. ಇದು ಅಂಗಣೆವಾರ್‌ನಲ್ಲಿನ ಬ್ರಹ್ಮರಾಕ್ಷಸನ ಕಾಟವೇ ಆಗಿರಬೇಕು ಎಂದು ಅವರಿಗೆ ಕಂಡುಬಂತು.

ಅವರು ಅದೇ ದಾರಿಯಲ್ಲಿ ಬ್ರಹ್ಮರಾಕ್ಷಸನಿಗಾಗಿ ಕಾದು ಕುಳಿತರು. ಬ್ರಹ್ಮ ರಾಕ್ಷಸ ಅಲ್ಲಿ ಬಂದಾಗ 'ನೀನು ಯಾರು?' ಎಂದು ಕೇಳಿದರು.

"ನಾನು ಬ್ರಹ್ಮರಾಕ್ಷಸ" ಎಂದು ಅದು ಹೇಳಿತು.

"ಓಹೋ! ಹೌದಾ! ನೀನು ಬಹಳ ದೊಡ್ಡದಾಗಿ ಬೆಳೆದು ನಿನ್ನ ಕಾರಣೀಕವನ್ನು ತೋರಿಸುತ್ತೀಯಂತೆ ಹೌದಾ?" ಎಂದರು.

"ಹೌದು, ನನ್ನ ನಿಜರೂಪ ತೋರಿಸಬೇಕೆ?"

"ಬೇಡ! ಬೇಡ! ನೀನು ಚಿಕ್ಕದಾದರೆ ಎಷ್ಟು ಚಿಕ್ಕದಾಗಲು ಸಾಧ್ಯ ನಿನಗೆ?"

"ಹಾಗಾ! ಒಂದು ಸಣ್ಣ ಸೊಳ್ಳೆಯಷ್ಟು."

"ಹಾಗಾದರೆ ಆಗು ನೋಡುವಾ. ಆಗಿ ಈ ತೆಂಗಿನಕಾಯಿಯ ತೂತಿನೊಳಗೆ ಹೋಗಲು ಸಾಧ್ಯವೇ ಎಂದು ನೋಡುವಾ" ಎಂದು ಸವಾಲೆಸೆದರು, ತಾನು ಮಾಡಿಸಿ ತಂದ ತಾಮ್ರದ ತೆಂಗಿನ ಕಾಯಿಯನ್ನು ತೋರಿಸಿದರು. ಬ್ರಹ್ಮರಾಕ್ಷಸ ಸೊಳ್ಳೆಯಷ್ಟು ಸಣ್ಣದಾಗಿ ತೆಂಗಿನಕಾಯಿಯ ಒಳಗೆ ಹೊಕ್ಕಿರುವುದನ್ನು ನೋಡಿದೊಡನೇ ಅದರ ತೂತನ್ನು ಮುಚ್ಚಿದರು. ಹಾಗೆ ಮಾಡಿ ಅದನ್ನು ಮಣ್ಣಿನಡಿಯಲ್ಲಿ ಹೂತಿಟ್ಟರು. ಹೀಗೆ ಮಾದಪ್ಪಯ್ಯರು ಯುಕ್ತಿಯಿಂದ ಬ್ರಹ್ಮರಾಕ್ಷಸನನ್ನು ತೆಂಗಿನಕಾಯಿಯ ಒಳಗೆ ಹಾಕಿಟ್ಟು ಜನರಿಗೆ ಬ್ರಹ್ಮರಾಕ್ಷಸನ ಕಾಟ ತಪ್ಪಿಸಿದರು. ಆ ಬಳಿಕ ಬ್ರಹ್ಮರಾಕ್ಷಸ ಅಲ್ಲಿ ಕಂಡುಬರಲಿಲ್ಲ.



ಮೂರು ಬಾರಿ ಸ್ನಾನ, ಒಮ್ಮೆ ಊಟ

ಗುಡ್ಡದ ಗೋವಳರ ಜೊತೆಯಲ್ಲಿ ಜಾನುವಾರುಗಳನ್ನು ಮೇಯಿಸಿಕೊಂಡು ಗೋಪಾಲಕೃಷ್ಣ ದೇವರೂ ಇದ್ದರು. ಒಮ್ಮೆ ಎಲ್ಲ ಜಾನುವಾರುಗಳನ್ನೂ ಬಳಿಗೆ ಕರೆದರು ಅವರು. ಕೊಳಲು ಊದಿ ಬರುವ ರಾಗದಲ್ಲಿ ಬರಲು ಹೇಳಿದಾಗ ಎಲ್ಲಾ ಜಾನುವಾರುಗಳೂ ಬಳಿಗೆ ಬಂದು ನಿಂತವು, "ಯಾಕೆ ಕರೆದಿರಿ? ಯಾಕೆ ಕರೆದಿರಿ ದೇವರೆ ಈ ಹೊತ್ತಿನಲ್ಲಿ?" ಎಂದು ಕೇಳಿದವು.

"ನಿತ್ಯವೂ ನೀವು ಹೇಗಿರಬೇಕು, ಹೇಗೆ ನಡತೆಯಿರಬೇಕು, ಯಾವಾಗ ಸ್ನಾನಮಾಡಬೇಕು? ಯಾವಾಗ ಉಣ್ಣಬೇಕು ಎನ್ನುವುದನ್ನೆಲ್ಲ ಈಗ ಹೇಳುತ್ತೇನೆ. ನಾಳೆಯಿಂದ ನೀವೆಲ್ಲರೂ ದಿನಕ್ಕೆ ಮೂರು ಬಾರಿ ಸ್ನಾನ ಮಾಡಬೇಕು. ಒಮ್ಮೆ ಊಟ ಮಾಡಬೇಕು. ತಿಳಿದಿರಲಿ! ಈ ನಿಯಮ ಮೀರಿದವರಿಗೆ ಕಠಿಣ ಶಿಕ್ಷೆ ಕಾದಿದೆ" ಎಂದು ನಿಯಮ ಮಾಡಿ ಬಿಟ್ಟರು.

ಯಾವಾಗಲೂ ಸ್ನಾನ ಮಾಡಿಯೇ ಊಟ ಮಾಡಬೇಕೆ? ಊಟ ಮಾಡಿದ ಬಳಿಕ ಸ್ನಾನ ಮಾಡಬಹುದೆ ಎಂದು ಕೇಳುವವರಿರಬಹುದು. ಸ್ನಾನ ಮಾಡದೆ ಉಣ್ಣುವವರೂ ಇರಬಹುದು. ಸ್ನಾನ ಮಾಡಲಾಗದಿದ್ದರೆ ಊಟ ಉಣ್ಣದವರು, ನಿದ್ರೆ ಮಾಡದವರೂ ಇದ್ದಾರೆ.

ಮೈಯ ಕೊಳೆ ಕಳೆಯದೆ, ಸ್ನಾನ ಮಾಡದೆ ಊಟ ಮಾಡಿ ಮಲಗುವವರನ್ನು ದೇವರು ತೂಗಿ ನೋಡುತ್ತಾರಂತೆ. ತುಂಬಾ ಕೊಳೆಯ ಮೈಯವರನ್ನು ಮೇಲಿನಿಂದ ಕೆಳಕ್ಕೆ ದುಡುಮ್ಮೆಂದು ದೂಡಿ ಬಿಡುತ್ತಾರಂತೆ. ನಿದ್ರೆಯಲ್ಲಿದ್ದಾಗ ಒಮ್ಮೊಮ್ಮೆ ಬಿದ್ದ ಹಾಗಾಗುವುದು ಇದರಿಂದಲೇ ಅಂತೆ.

ಮತ್ತೆ ಒಂದು ದಿನ ಜಾನುವಾರುಗಳನ್ನೆಲ್ಲ ಕರೆದು ಗೋಪಾಲ ಕೃಷ್ಣ ದೇವರು ಕೇಳಿದರು, "ದಿನಕ್ಕೆ ಎಷ್ಟು ಬಾರಿ ಸ್ನಾನ ಮಾಡುತ್ತೀರಿ? ಎಷ್ಟು ಬಾರಿ ಊಟ ಮಾಡುತ್ತೀರಿ?".

ಎಲ್ಲ ಜಾನುವಾರುಗಳೂ ಉತ್ತರವಿತ್ತವು, "ನಾವು ನಿತ್ಯವೂ ಮೂರು ಸಲ ಉಣ್ಣುತ್ತಿದ್ದೇವೆ, ಒಮ್ಮೆ ಸ್ನಾನ ಮಾಡುತ್ತಿದ್ದೇವೆ."

ಈ ಮಾತನ್ನು ಕೇಳಿ ಕೃಷ್ಣ ದೇವರಿಗೆ ಕೋಪ ನೆತ್ತಿಗೇರಿತು. "ಇಂದಿನಿಂದ ನಿಮಗೆ ಮಾತು ಬಾರದೆ ಹೋಗಲಿ" ಎಂದು ಅವರು ಶಾಪವಿತ್ತರು!

ಹಾಗಾಗಿ ಜಾನುವಾರುಗಳು ಯಾವತ್ತೂ ಮಾತನಾಡುವುದಿಲ್ಲ.





ಹೆಂಡತಿಯಲ್ಲಿ ಪ್ರೀತಿಯೋ, ಮಕ್ಕಳಲ್ಲೋ?

ಪರವೂರಿಗೆ ಹೋಗಿದ್ದಾತ ಮರಳಿ ಬಂದಿರುವುದು ಮಕ್ಕಳನ್ನು ನೋಡಲೆಂದೇ? ಅಥವಾ ಹೆಂಡತಿಯನ್ನು ನೋಡಲೆಂದೇ?

ಹೀಗೆ ಒಂದು ಸಲ ಒಬ್ಬನಿಗೆ ತನ್ನ ಹೆಂಡತಿಯನ್ನು ನೋಡಬೇಕು ಅನ್ನಿಸಿತು. ಆದರೆ ಬಾಯಿ ಬಿಟ್ಟು ಹೆಂಡತಿಯನ್ನು ನೋಡಲು ಹೋಗುವುದೆನ್ನಲಾಗುತ್ತದೆಯೆ? ಕೇಳಿದವರಲ್ಲಿ ತನ್ನ ಮಕ್ಕಳನ್ನು ನೋಡಲು ಹೊರಟಿರುವುದು ಎಂದ.

ಮಕ್ಕಳನ್ನು ನೋಡಲು ಹೋಗುವಾಗ ಬರಿಗೈಯಲ್ಲಿ ಹೋಗಲಾಗುತ್ತದೆಯೆ? ಅವು ಕೈ ಬಾಯಿ ನೋಡಲಿಕ್ಕಿಲ್ಲವೆ? ಹಾಗಾಗಿ ಕಂಕುಳಡಿಯಲ್ಲಿ ತಿಂಡಿಯ ಗಂಟು, ತಲೆಯ ಮೇಲೂ ಅಂತಹದೇ ಮತ್ತೊಂದು ಹೊರೆ ಅಥವಾ ಹೆಗಲ ಮೇಲೆ ಅಂತಹ ಒಂದು ಚೀಲ ಜೋತಾಡೀತು.

ಹೀಗೆ ದಾರಿಯಲ್ಲಿ ಬರುತ್ತಿದ್ದಾತನಿಗೆ ಒಂದು ನದಿ ದಾಟಬೇಕಾಯಿತು. ನದಿ ಆಳವಿರುವುದರಿಂದ, ಜೊತೆಗೆ ಕೈಯಲ್ಲಿ, ತಲೆಯಲ್ಲಿ ಹೊರೆ ದೊಡ್ಡದಿರುವುದರಿಂದ ದೋಣಿಗಾಗಿ ಕಾಯಲೇ ಬೇಕಾಯಿತು.

ಅಂಬಿಗ ದೋಣಿ ತಂದಾಗ ಈತ ದೋಣಿಯಲ್ಲಿ ಕುಳಿತ. ಹೊಸಬನನ್ನು ನೋಡಿದ ಅಂಬಿಗ "ತಮಗೆ ಎಲ್ಲಿಗೆ ಹೋಗಬೇಕು?" ಎಂದು ಕೇಳಿದ.

ಹೆಂಡತಿ ಮನೆಗೆ ಹೋಗುವುದೆಂದು ಹೇಗೆ ಹೇಳುವುದು? "ಮಕ್ಕಳನ್ನು ನೋಡಬೇಕೆಂದೆನಿಸಿದೆ. ಹಾಗೆಂದು ಹೊರಟೆ" ಎಂದ.

"ಹೌದಾ ಮಹರಾಯ! ನಿನ್ನ ಹೆಂಡತಿ ಮೊನ್ನೆ ತೀರಿಕೊಂಡಳಂತಲ್ಲ! ನಿನಗೆ ಗೊತ್ತಿಲ್ಲವೇ?" ಎಂದು ದೋಣಿಯವನು ಈತನನ್ನು ಆಟವಾಡಿಸಬೇಕೆಂದು ಒಂದು ಸುಳ್ಳು ಹೇಳಿದ.

"ಅಯ್ಯೋ ದೇವರೇ! ಇದು ನಿಜವೇ! ನೀವು ದೋಣಿ ಹಿಂದೆ ತಿರುಗಿಸಿ" ಎಂದು ದೋಣಿಯವನಲ್ಲಿ ಕೇಳಿಕೊಂಡ. ಕೈಯಲ್ಲಿದ್ದುದನ್ನೆಲ್ಲ ನದಿಗೆ ಹಾಕಿ, ಹಿಂದಕ್ಕೂ ನೋಡದೆ ಮರಳಿದ. ಈಗ ನೀವೇ ಹೇಳಿ ಅವನಿಗೆ ಹೆಂಡತಿ ಬೇಕಿದ್ದುದೇ? ಅಥವಾ ಅವನು ಮಕ್ಕಳಿಗಾಗಿ ಬಂದುದೇ?

ಕುಷ್ಠರೋಗಿಯಾದ ನರಿ

ಒಮ್ಮೆ ಸೇಂದಿ ಇಳಿಸುವಾತ ಸೇಂದಿ ಇಳಿಸಿ ಹೋದ ಬಳಿಕ ಅಲ್ಲಿಗೆ ಒಂದು ನರಿ ಬಂತು. ತಾಳೆ ಮರದಡಿಯಲ್ಲಿ ಕುಳಿತು ತಲೆಯೆತ್ತಿ ನೋಡಿತು. ತಾಳೆ ಮರ ಚಿಕ್ಕದಾಗಿರುವುದರಿಂದ ಒಂದೇ ನೆಗೆತಕ್ಕ ಅದರ ತುದಿಗೆ ಹಾರಿತು. ಅಲ್ಲಿ ಸೇಂದಿ ತುಂಬಿದ ಗಡಿಗೆಯನ್ನು ನೋಡಿ, ಕೂಡಲೇ ಪಚಪಚನೆ ಸೇಂದಿ ಕುಡಿಯಿತು. ಸೇಂದಿ ಕುಡಿದ ನರಿಗೆ ಅಲ್ಲೇ ಅಮಲೇರಿ, ಹಿಡಿತ ತಪ್ಪಿ ಮರದಿಂದ ಕೆಳಗೆ ಬಿತ್ತು.

ಕೆಳಗೆ ಉತ್ತು ಹದ ಮಾಡಿಟ್ಟಿರುವ ಗದ್ದೆ. ನರಿ ತಲೆ ಕೆಳಗಾಗಿ ಬಿದ್ದು ಕೆಸರಿನಲ್ಲಿ ಹೂತು ಹೋಯಿತು. ಮೂತಿ ಕೆಸರಿನ ಒಳಗೆ, ಬಾಲ ಮಾತ್ರ ಹೊರಗೆ ಅಲುಗಾಡುತ್ತಿತ್ತು.

ಅಷ್ಟು ಹೊತ್ತಾಗುವಾಗ ಅಲ್ಲಿಗೊಬ್ಬಳು ವಿಧವೆ ಬಂದಳು. ಇದೇನು ಹೀಗೆ ಅಲುಗಾಡುತ್ತಿರುವುದು ಎಂದು ನರಿಯ ಬಾಲವೆಂದು ತಿಳಿಯದೆ ಹಿಡಿದು ಎಳೆದಳು. ನೋಡಿದರೆ ನರಿ! ಅದು ಆಕೆಯ ಕೈಯಿಂದ ತಪ್ಪಿಸಿಕೊಂಡು ಹಾರಿ ಓಡಿತು. ಒಂದು ಕೆರೆಗೆ ಹೋಗಿ ಕೆಸರನ್ನು ತೊಳೆದುಕೊಳ್ಳಲು ಸ್ನಾನ ಮಾಡಿತು. ಒದ್ದೆ ಮೈಯನ್ನು ಒರಸಿಕೊಳ್ಳಲೆಂದು ಚಗ್ತೆ ಪೊದೆಯಲ್ಲಿ ಹೊರಳಾಡಿತು. ನರಿಯ ಒದ್ದೆ ಮೈಗೆ ಚಗ್ತೆ ಎಲೆಗಳು ಅಂಟಿಕೊಂಡವು.

ತನ್ನ ಮೈಯಲ್ಲಿ ಅಂಟಿರುವ ಚಗ್ತೆ ಎಲೆಗಳನ್ನು ನೋಡಿದ ನರಿ ತನಗೆ ಕುಷ್ಠ ರೋಗ ಹಿಡಿದಿದೆ ಎಂದುಕೊಂಡಿತು. ಅದಕ್ಕೆ ವಿಧವೆಯ ಮೇಲೆ ಕೋಪ. "ನಾನು ಸೂರ್ಯನಮಸ್ಕಾರ ಮಾಡುತ್ತಿದ್ದೆ. ಆ ಮುಂಡೆ ಮುಟ್ಟಿದ್ದರಿಂದ ನನಗೆ ಕುಷ್ಠ ರೋಗ ಹಿಡಿದಿದೆ" ಎನ್ನಬೇಕೆ ನರಿ!



ನರಿ ಹೇಳಿದ ಹರಕೆ

ನರಿ ಚಗ್ತೆ ಪೊದರಿನಲ್ಲಿ ಹೊರಳಾಡಿ ಏಳುವಾಗ ಮೈ ಇಡೀ ಅಲ್ಲಲ್ಲಿ ಬಣ್ಣ ಬದಲಾದಂತೆ ಅನಿಸಿದೆ. ಇದನ್ನು ನೋಡಿದ ನರಿಗೆ ಹೆದರಿಕೆಯಾಯಿತು. ಒದ್ದೆ ಮೈಗೆ ಚಗ್ತೆ ಎಲೆಗಳು ಅಂಟಿಕೊಂಡಿವೆ ಎಂದು ನರಿಗೇನು ಗೊತ್ತು? ಇನ್ನೇನು ಮಾಡುವುದೆಂದು ನರಿ ಚಿಂತೆಯಲ್ಲಿ ಮುಳುಗಿತು. ಹಾಗೆಯೇ "ನನ್ನ ಮೈಮೇಲಿನ ಕುಷ್ಠ ರೋಗ ನಿವಾರಣೆಯಾದರೆ ಸಮುದ್ರಕ್ಕೊಂದು ಹುಲಿಯನ್ನು ದಾನ ಮಾಡುತ್ತೇನೆ"ಂದು ಹರಕೆ ಹೇಳಿಕೊಂಡಿತು.

ಸ್ವಲ್ಪ ಹೊತ್ತಿನಲ್ಲಿ ಬಿಸಿಲಿಗೆ ಒದ್ದೆ ಮೈ ಒಣಗುವಾಗ ನರಿಯ ಮೈ ಮೇಲಿದ್ದ ಚಗ್ತೆ ಎಲೆಗಳೂ ಕೆಳಗೆ ಬಿದ್ದವು. ಅಂತೂ ಹರಕೆ ಹೇಳಿದ್ದು ಸಾರ್ಥಕವಾಯಿತೆಂದು ನರಿ ಖುಷಿಪಟ್ಟಿತು. ಆದರೆ ಹೇಳಿದ ಹರಕೆ ತೀರಿಸಬೇಕಲ್ಲ! ಸಮುದ್ರಕ್ಕೆ ಹುಲಿಯೊಂದನ್ನು ದಾನವಾಗಿ ಕೊಡಬೇಕಲ್ಲ! ಹುಲಿಯನ್ನು ಸಮುದ್ರದ ಬಳಿಗೆ ಕರೆತರಲು ಏನು ಕತೆ ಕಟ್ಟುವುದು? ಎಂದು ಯೋಚಿಸತೊಡಗಿತು. ಹೀಗೆಂದುಕೊಳ್ಳುತ್ತಾ ಹುಲಿ ಬೇಟೆಗೆ ನರಿ ಹೊರಟಿತು.

ಹೀಗೆ ಹೋಗುತ್ತಿರಲು ಹುಲಿಯೊಂದು ಎದುರಿಗೆ ಕಂಡಿತು. ದೂರದಿಂದಲೇ "ನಮಸ್ಕಾರ ಹುಲಿಯಣ್ಣನಿಗೆ. ಇವತ್ತೇನು ಸವಾರಿ ಎಲ್ಲೂ ಹೊರಟಿಲ್ಲವೇ?" ಎಂದು ಕೇಳಿತು ನರಿ.

"ಎಲ್ಲಿಗೆ ಹೋಗುವುದು? ಏನೂ ಮೃಗ ಜಂತುಗಳು ಸಿಗದೆ ಮೂರು ದಿನಗಳಾದುವು" ಎಂದು ಹುಲಿ ಉತ್ತರಿಸಿತು.

"ಇಲ್ಲಿ ಕುಳಿತಿದ್ದರೆ ಏನು ಸಿಕ್ಕೀತು ಮಣ್ಣು? ಹುಲಿಯಣ್ಣ, ನಾವು ಸಮುದ್ರದ ಬಳಿಗೆ ಹೋಗುವನಾ? ಅಲ್ಲಿ ದೊಡ್ಡ ದೊಡ್ಡ ಕಡಲ ಜಂತುಗಳು ತೆರೆಯಿಂದ ಮರಳಿಗೆ ಹಾರುತ್ತಿರುತ್ತವೆ. ಏನಿಲ್ಲದಿದ್ದರೂ ನಾಲ್ಕು ಕಡಲ ಮೊರಂಟೆಗಳಾದರೂ ಜಗಿಯಲು ಸಿಕ್ಕಿಯಾವು" ಎಂದು ನರಿ ಆಸೆ ಹುಟ್ಟಿಸಿತು. ಹುಲಿಗೂ ಅಲ್ಲಿ ಕುಳಿತು ಕುಳಿತು ಬೇಸರವಾಗಿತ್ತು. "ಸರಿ, ಹೋಗುವ" ಎಂದು ಹುಲಿ ಎದ್ದು ನರಿಯೊಡನೆ ಹೊರಟಿತು.

ನರಿ ಹುಲಿಯನ್ನು ಕರೆದುಕೊಂಡು ಸಮುದ್ರದ ಕಡೆಗೆ ಹೊರಟಿತು. ದಾರಿಯಲ್ಲಿ ಹುಲಿಗೆ ತಿಳಿಯದಂತೆ ಒಂದಿಷ್ಟು ಕಾರೊಳು ಕಾಯಿಗಳನ್ನು ಕೊಯ್ದು ಕೈಯಲ್ಲಿ ಹಿಡಿದುಕೊಂಡಿತು. ಅಂತೂ ಎರಡೂ ಸಮುದ್ರ ತಲುಪಿದವು.

"ಎಲ್ಲಿ ನರಿಯಣ್ಣ, ಕಡಲ ಮೃಗಗಳು? ನನಗೆ ತುಂಬಾ ಹಸಿವೆಯಾಗುತ್ತಿದೆ" ಹುಲಿ ನರಿಯಲ್ಲಿ ಕೇಳಿತು.

ಇಲ್ಲಿ ಮರಳಲ್ಲಿ ನಿಂತುಕೊಳ್ಳೋಣ. ಒಂದೊಂದೇ ತೆರೆ ಬಂದಾಗ ಆ ತೆರೆಗೆ ತಲೆ ಕೊಟ್ಟು ಹಾರಬೇಕು. ಆ ತೆರೆಯೊಳಗೆ ಸಿಗುತ್ತವೆ. ಈಗ ನಾನು ಹಾರಿ ತೋರಿಸುತ್ತೇನೆ" ಎಂದು ಒಂದು ಸಣ್ಣ ತೆರೆ ಬಂದಾಗ ನರಿ ಹಾರಿತು. ಅದೇ ಹೊತ್ತಿಗೆ ಒಂದು ಕಾರೊಳು ಕಾಯಿಯನ್ನು ಬಾಯಿಗೆ ಹಾಕಿಕೊಂಡು ಕುರು ಕುರು ಜಗಿಯಲು ಆರಂಭಿಸಿತು.

ಶಬ್ದ ಕೇಳಿದ ಹುಲಿ ಕೇಳಿತು, "ಅದೇನು ನರಿಯಣ್ಣ, ನಿನ್ನ ಬಾಯಲ್ಲಿ?"

"ಅದೇ, ತೆರೆಯಲ್ಲಿ ಹಾಕಿದಾಗ ಸಿಕ್ಕಿರುವ ಮೊರಂಟೆ" ನರಿ ಉತ್ತರಿಸಿತು. "ಈಗ ತೆರೆ ಬರುತ್ತಿದೆ, ನೀನೀಗ ಹಾರು" ಎಂದಿತು.

ಹುಲಿ ತೆರೆ ಬಂದಾಗ ಹಾರಿದರೂ ಏನೂ ಸಿಗಲಿಲ್ಲ. ಮುಖ ಬಾಡಿಸಿ "ಏನೂ ಸಿಗಲಿಲ್ಲ" ಎಂದಿತು.

"ಏನೂ ಸಿಕ್ಕಿಲ್ಲವೆ? ಇನ್ನೊಮ್ಮೆ ನೋಡುವ ಎಂದು ನರಿ ಮತ್ತೊಮ್ಮೆ ಹಾರಿತು. ಜೊತೆಗೆ ಕಾರೊಳು ಕಾಯಿಯನ್ನು ಬಾಯಿಗೆ ಹಾಕಿ ಕುರುಕುರು ತಿನ್ನತೊಡಗಿತು.

"ಅದೇನು ನರಿಯಣ್ಣ ನಿನ್ನ ಬಾಯಲ್ಲಿ?" ಹುಲಿ ಕೇಳಿತು. "ಅದಾ? ಇನ್ನೊಂದು ಮೊರಂಟೆ!" ನರಿ ಉತ್ತರಿಸಿತು.

"ಅದೇನು ನಿನಗೆ ಮಾತ್ರ ಸಿಗುವುದು?" ಎಂದು ಹುಲಿ ಕೇಳಿದಾಗ "ಈಗ ದೊಡ್ಡದೊಂದು ತೆರೆ ಬರುತ್ತಿದೆ, ಅದಕ್ಕೆ ಜೋರಾಗಿ ಹಾರು, ಖಂಡಿತ ಸಿಗುತ್ತದೆ" ಎಂದಿತು ನರಿ.

ಇದನ್ನು ಕೇಳಿ ಹುಲಿ ದೊಡ್ಡ ತೆರೆ ಬಂದಾಗ ಹಾರಿತು. ತೆರೆಯ ಸುಳಿಯ ಸೆಳವಿಗೆ ಸಿಕ್ಕಿ ದೂರ ದೂರ ಹೋಯಿತು.

"ಹೋಗು ಹೋಗು, ಹಾಗೆ ಹಾಗೇ ದೂರ ಹೋಗು, ಹಿಂದಕ್ಕೆ ಬರಬೇಡ" ಎಂದು ನರಿಯು ಹುಲಿ ನಡುಗಡಲಿಗೆ ಹೋಗುವವರೆಗೆ ನೋಡಿ, "ಕಡಲಿಗೊಂದು ಹುಲಿ ದಾನವಿತ್ತೆ" ಎಂದು ಹೇಳಿಕೊಂಡು ಖುಷಿಯಿಂದ ಕಾಡಿಗೆ ಓಡಿತು.

ನಿನಗೆ ನೆನೆದಾಗ ಮರಣ!

ಸಿರಿ ಸೀತಾಮು ದೇವಿಯನ್ನು ರಾಕ್ಷಸ ರಾವಣ ಕದ್ದು ಕೊಂಡೊಯ್ದ. ರಾಮ ದೇವರು ರಾಕ್ಷಸರನ್ನು ಗೆದ್ದು ಹೆಂಡತಿಯನ್ನು ಕರೆತರಲು ಯುದ್ಧಕ್ಕೆಂದು ಹೊರಟರು. ಮಂಗಗಳನ್ನು ಕೂಡಿಸಿಕೊಂಡು ಸಮುದ್ರಕ್ಕೆ ಸೇತುವೆ ನಿರ್ಮಿಸಿದರು. ಸೇತುವೆ ನಿರ್ಮಾಣದ ಸಮಯದಲ್ಲಿ ಊರೂರಿನ ಮಂದಿಯೆಲ್ಲ, ಜೊತೆಗೆ ಮೃಗ ಪಕ್ಷಿಗಳೂ ಬಂದು ರಾಮದೇವರಿಗೆ ಸಹಾಯ ಮಾಡಿದವು. ಸೇತುವೆಗೆ ಕಲ್ಲು ಮಣ್ಣು ಹೊರಲು ಸೇರಿದವು.

ತನ್ನ ಹೆಂಡತಿಯನ್ನು ಕಳೆದುಕೊಂಡ ರಾಮ ದೇವರು ಕಣ್ಣೀರಿಟ್ಟು ತನ್ನ ಕಷ್ಟವನ್ನು ಹೇಳಿಕೊಂಡಾಗ ಯಾರು ತಾನೆ ಸಹಾಯ ಮಾಡದಿರುವವರು? ಆದರೂ ಕೋಳಿಯಲ್ಲಿ ಕರೆದು ಹೇಳಿದಾಗ ಕೋಳಿ "ಮಣ್ಣು-ಕಲ್ಲು ಹೊರಲು ನನಗಾಗದು. ನನ್ನ ತಲೆಯ ಮೇಲೆ ತುರಾಯಿ ಇದೆ" ಎಂದಿತು. ಇದನ್ನು ಕೇಳಿ ಕೋಪಗೊಂಡ ರಾಮು ದೇವರು ಕೋಳಿಗೆ ಶಾಪವಿಟ್ಟರಂತೆ- "ನಿನಗೆ ನೆನೆದಾಗ ಮರಣವಿರಲಿ!"

ಹಾಗಾಗಿ ಕೋಳಿಗೆ ನೆನೆದಾಗ ಮರಣ ಬಂದೀತು. ಬಾರದ ನೆಂಟರು ಬಂದಾಗ, ಅಪರೂಪಕ್ಕೆ ಯಾರಾದರೂ ಬಂದರೆ, ಮೇಲೋಗರಕ್ಕೇನೂ ಇಲ್ಲದೆ ಹೋದಾಗ ಕೋಳಿಯ ನೆನಪಾದೀತು. ಅದಕ್ಕೆ ಕೊನೆಕಾಲ ಬಂದೀತು."

ಕೊಡವಿ ಎದ್ದಿತು ಕುದುಂಬುಳು ಹಕ್ಕಿ

ರಾಹುವಿಗೆ ಕಲ್ಲು, ಗುಳಿಗನ ಬನ ಹೀಗೆಲ್ಲ ನಾವು ಕೇಳಿದ್ದೇವೆ. ಭೂತ ಪ್ರೇತ ಪಿಶಾಚಿಗಳು ಕಲ್ಲು ಅಥವಾ ಮರದಲ್ಲಿ ನೆಲೆಯಾಗಿರುತ್ತವೆ ಎನ್ನುವುದು ನಂಬಿಕೆ. ಎಷ್ಟೋ ಬಾರಿ ಅವುಗಳನ್ನು ಕಲ್ಲು ಹಾಕಿ ನಂಬುವ ಕ್ರಮವೂ ಇದೆ. ಹಾಗೆ ಹಾಕಿದ ಕಲ್ಲುಗಳನ್ನು ನಾವು ಮುಟ್ಟಬಾರದು, ಮೈಲಿಗೆ ಮಾಡಬಾರದು. ಹೆಚ್ಚಾಗಿ ಜನ ಮಂದೆ ಹೆದರಿಕೆಯಲ್ಲಿ ಆ ಕಡೆಗೆ ನೋಡುವುದೇ ಇಲ್ಲ. ಆದರೆ ಗೊತ್ತಿರದೆ ಅದರಲ್ಲೇ ಕುಳಿತು ಮೂತ್ರ ಮಾಡಿದರೂ ಕೇಳುವವರು ಯಾರು?

ಏನು ಆಗುತ್ತದೆ ನೋಡಬೇಕೆಂದು ಒಬ್ಬ ಇಂತಹ ಕಲ್ಲಿನಲ್ಲೇ ಕುಳಿತು ದಿನವೂ ಮೂತ್ರ ಮಾತ್ರವಲ್ಲ, ಮಲ ವಿಸರ್ಜನೆಯನ್ನೂ ಮಾಡುತ್ತಿದ್ದನಂತೆ. ಅದರಲ್ಲಿದ್ದ ಭೂತಕ್ಕೆ ಏನೂ ಮಾಡಲಾಗದೆ ಆತ ಕುಳಿತೊಡನೆ ಕಲ್ಲನ್ನು ಬಿಟ್ಟು ದೂರ ಹೋಗುತ್ತಿತ್ತು. ಭೂತ ಆತನಿಗೆ ಹೆದರಿ ಕಲ್ಲು ಬಿಟ್ಟು ಹೋಗುವುದನ್ನು ದಿನವೂ ಒಂದು ಕುದುಂಬುಳು ಹಕ್ಕಿ ನೋಡುತ್ತಿತ್ತು.

ಕುದುಂಬುಳು ಎಂದರೆ ಬಹಳ ಚಿಕ್ಕ ಒಂದು ಮಲೆ ಹಕ್ಕಿ. ಆದರೆ ಬಹಳ ರುಚಿ ಅದರ ಮಾಂಸ. ಅದು ಕುಳಿತಲ್ಲಿಂದ ಏಳುವಾಗ ಬುಸ್ಸೆಂದು ಶಬ್ದ ಮಾಡಿಕೊಂಡು ಹಾರುತ್ತದೆ. ಈ ಹಕ್ಕಿಯ ಬಗ್ಗೆ ಪಾಡ್ದನಗಳಲ್ಲೂ ಉಲ್ಲೇಖವಿದೆ. ಕಲ್ಲು ಬಿಟ್ಟು ದೂರ ನಿಲ್ಲುವ ಭೂತವನ್ನು ಒಂದು ದಿನ ಕುದುಂಬುಳು ಹಕ್ಕಿ "ಯಾಕೆ ಮಹರಾಯ? ನಿನ್ನ ಜಾಗ ಬಿಟ್ಟು ಎದ್ದು ನಿಂತಿರುವಿ?" ಎಂದು ಕೇಳಿತು. ಭೂತ ತನಗಾಗುತ್ತಿರುವ ಅಪಮಾನವನ್ನು ಕುದುಂಬುಳು ಹಕ್ಕಿಯಲ್ಲಿ ಹೇಳಿಕೊಂಡಿತು.

"ಹಾಗೆಯೋ? ಹಾಗಾದರೆ ನಾಳೆ ನೋಡುವ. ಅವನು ಕಲ್ಲಿನಲ್ಲಿ ಕುಳಿತುಕೊಳ್ಳುವಾಗ ನಾನು ಅಲ್ಲಿಂದ ಕೊಡವಿ ಏಳುತ್ತೇನೆ. ಆಗ ನೀನವನನ್ನು ಹಿಡಿದುಕೊಳ್ಳಬೇಕು" ಎಂದು ಅದು ಭೂತಕ್ಕೆ ಧೈರ್ಯ ಕೊಟ್ಟಿತು.

ಮರುದಿವಸ ಆ ವ್ಯಕ್ತಿ ಬಂದ. ಎಂದಿನಂತೆ ಕಲ್ಲಿನಲ್ಲಿ ಕುಳಿತ. ಅಷ್ಟು ಹೊತ್ತಿನಲ್ಲಿ ಕುದುಂಬುಳು ಹಕ್ಕಿ ಒಮ್ಮೆಲೇ ಕೊಡವಿ ಎದ್ದಿತು. ಅವನು ಒಮ್ಮೆಲೇ ಬೆಚ್ಚಿ ಬಿದ್ದು ಹೆದರಿಕೊಂಡ. ಹೆದರಿಕೊಂಡವನನ್ನು ಭೂತ ಹಿಡಿದುಕೊಂಡಿತು. ಹೀಗೆ ಭೂತಕ್ಕೆ ಸಣ್ಣ ಕುದುಂಬುಳು ಹಕ್ಕಿ ಸಹಾಯ ಮಾಡಿತು.

ಇದರಲ್ಲಿ ಉಳಿದರೆ ನಾಲ್ಕು, ಇಲ್ಲವಾದರೆ ಮೂರು

ಹೆಣ್ಣು ನೋಡಲೆಂದು ಒಂದು ಮನೆಗೆ ನೆಂಟರು ಬಂದರು. ಬಂದ ನೆಂಟರಿಗೆ ಮಾತುಕತೆಯಲ್ಲಿ, ಊಟ ತಿಂಡಿಯಲ್ಲಿ ಪರೀಕ್ಷೆ ಮಾಡಿ ನೋಡುವುದು ಹಿಂದಿನ ಒಂದು ವಾಡಿಕೆ. ಅದರಲ್ಲೂ ಮದುಮಗನಿಗೆ ಸ್ವಲ್ಪ ಈ ಪರೀಕ್ಷೆ ಹೆಚ್ಚೇ ಎನ್ನಬೇಕು. ಅವರಿಗೆ ಈ ನೆಂಟಸ್ತನ ಇಷ್ಟವಿಲ್ಲವೆಂದಾದರೆ ಮತ್ತಷ್ಟು ಕಷ್ಟ ತೆಗೆದಾರು.

ಆ ಮನೆಯವರು ಔತಣ ತಯಾರಿಸುವಾಗ ಹೆಚ್ಚು ಮೆಣಸು ಹಾಕಿ ಒಂದು ಮೆಣಸಿನ ಕಷಾಯ ಮಾಡಿದ್ದರು. ಅದನ್ನು ಮದುಮಗನಿಗೆ ಮಾತ್ರ ಬಡಿಸಿದರು. ಉಳಿದವರಿಗೆ ಈ ಬಗ್ಗೆ ಏನೂ ಗೊತ್ತಿರಲಿಲ್ಲ. ಮದುಮಗನಿಗೆ ತಡೆಯಲಾಗದಷ್ಟು ಖಾರವಾಯ್ತು. ಆದರೆ ಯಾರಿಗೂ ಹೇಳಿಕೊಳ್ಳುವಂತಿರಲಿಲ್ಲ.

ಊಟ ಮಾಡುತ್ತಿರುವಾಗ ಹೆಣ್ಣಿನ ತಂದೆ ಮದುಮಗನಲ್ಲಿ ಹೀಗೆ ಕೇಳಿದರು, "ನೀವು ಎಷ್ಟು ಜನ ಮಕ್ಕಳು?" ಆಗ ಮದುಮಗ ಉಸುರು ತೆಗೆಯಲಾಗದೆ ಬಿಕ್ಕುತ್ತ, ಉರಿ ತಡೆಯಲಾಗದೆ "ಇದರಲ್ಲಿ ನಾನು ಮೇಲೆ ಬಿದ್ದರೆ ನಾಲ್ಕು ಮಂದಿ! ಇಲ್ಲವಾದರೆ ಮೂರೇ!"

ಲೋಕ ಕಾಯುವ ಏಡಿ



ಈ ಭೂಮಿಯು ಸುತ್ತಲೂ ಕಡಲು ಇದೆ. ಈ ಕಡಲಿನಲ್ಲಿ ಭೂಮಿಯಲ್ಲಿರುವಷ್ಟು ಬಗೆಯ ಮೃಗ ಜಂತುಗಳು ಇವೆ. ಭೂಮಿಯಲ್ಲಿ ನಾಯಿ ಇದ್ದರೆ ನೀರಿನಲ್ಲಿ ನೀರು ನಾಯಿ; ಭೂಮಿಯಲ್ಲಿ ಆನೆ ಇದ್ದರೆ ನೀರಿನಲ್ಲಿ ನೀರಾನೆ. ಹಾಗಾಗಿ ಕಡಲಿನಲ್ಲಿ ಮೀನುಗಳು ಮಾತ್ರ ಇರುವುದಲ್ಲ.

ಹೀಗಿರುವ ಕಡಲಿನಲ್ಲಿ ಎಷ್ಟು ದೊಡ್ಡ ಮೀನು ಇದೆ, ಎಷ್ಟು ಸಣ್ಣ ಮೀನು ಇದೆಯೆಂದು ಹೇಳಲಿಕ್ಕಾಗದು. ಆದರೆ ಒಂದು ಮೀನು ಮಾತ್ರ ಭಾರೀ ದೊಡ್ಡದು. ಅದು ಈ ಭೂಮಿಗೆ ಸುತ್ತು ಹಾಕಿದೆ. ಹಾಗಾಗಿ ಅದು ಎಷ್ಟು ದೊಡ್ಡದು ಎಂದು ಹೇಳಲು ಸಾಧ್ಯವಿಲ್ಲ. ಈ ಮೀನಿನ ಬಾಯಿಗೆ ಅದರ ಬಾಲ ಮುಟ್ಟುವಷ್ಟು ದೊಡ್ಡದಾಗಿ ಅದು ಬೆಳೆಯುತ್ತಿದೆ. ಆದರೆ ಯಾವಾಗ ಅದರ ಬಾಲ ಅದರ ತಲೆಗೆ ತಾಗುವುದೋ ಅಂದಿಗೆ ಮುಗಿಯಿತು. ಅಂದಿಗೆ ಈ ಲೋಕ ಪ್ರಳಯವಾಯಿತೆಂದು ಲೆಕ್ಕ. ಆಗ ಭೂಮಿಯೂ ಇಲ್ಲ, ಭೂಮಿಯ ಮೇಲಿರುವ ಜೀವ ಜಂತುಗಳೂ ಇಲ್ಲ. ನಾಲ್ಕೂ ಕಡೆ ಕಡಲೇ ಆಗಿ ಹೋಗೀತು.

ಆದರೆ ಹಾಗಾಗಬಾರದಲ್ಲವೆ? ಲೋಕದ ಬದುಕು ಭಾಗ್ಯ ಉಳಿಯಬೇಕು. ಅದಕ್ಕಾಗಿ ಒಂದು ದೊಡ್ಡ ಏಡಿ ಕಾದು ಕುಳಿತಿದೆ. ಯಾವಾಗ ಆ ಮೀನಿನ ಬಾಲ ಅದರ ತಲೆಗೆ ತಾಗುವಷ್ಟಾಗುವುದೋ ಆಗ ಕಟಕ್ಕೆಂದು ಮೀನಿನ ಬಾಲವನ್ನು ಏಡಿ ಕತ್ತರಿಸಿ ಹಾಕುತ್ತದೆ. ಯಾವತ್ತಿಗೂ ಆ ಮೀನಿನ ಬಾಲವನ್ನು ಅದರ ತಲೆಗೆ ತಾಗಲು ಬಿಡುವುದಿಲ್ಲ ಈ ಏಡಿ. ಹಾಗಾಗಿಯೇ ಇದು ಲೋಕವನ್ನು ಕಾಯುವ ಏಡಿ.

ಕಬ್ಬು ತಿಂದುಕೊಂಡು ಬಾ ಎಂದರೆ ಕಡ್ಲೆ ತಿಂದು ಬಂದನಂತೆ

ಅಜ್ಜಿ ಮನೆಗೆ ಮೊಮ್ಮಗ ಒಬ್ಬ ಬಹಳ ಅಪರೂಪದಲ್ಲಿ ಬಂದ. ನೋಡದೆ ಬಹಳ ಸಮಯವಾಗಿತ್ತು. ಅಜ್ಜಿ ಮೊಮ್ಮಗನನ್ನು ನೋಡಿಯೇ ನೋಡಿದಳು. ಆದರೆ ಮೊಮ್ಮಗ ಹಲ್ಲು ಬಿಟ್ಟಾಗ, ಆತನ ಹಲ್ಲುಗಳನ್ನು ನೋಡಿ ಅಜ್ಜಿಗೆ ವಾಂತಿ ಬರುವಂತಾಯಿತು. ಅವನು ಹಲ್ಲು ಉಜ್ಜದೆ ಯಾವ ಕಾಲವಾಗಿತ್ತೋ! ಕೇಪಳ ಹಣ್ಣಿನ ಹಾಗೆ ಕೆಂಪು ಕೆಂಪಾಗಿತ್ತು. ಮೊಮ್ಮಗನ ಹಲ್ಲು ಬಿಳಿದಾಗಿಸಬೇಕೆಂದು ಅಜ್ಜಿಗೊಂದು ಆಸೆ. ಆದರೆ ಹಲ್ಲು ಉಜ್ಜು ಎಂದು ಹೇಳಿ ಬೇಸರ ಮಾಡುವುದು ಹೇಗೆ? ಅದಕ್ಕಾಗಿ ಅಜ್ಜಿ ಒಂದು ಯುಕ್ತಿ ಹೂಡಿದಳು.

"ನೋಡು ಮಗಾ, ಓ ಅಲ್ಲಿ ಒಂದು ಅಂಗಡಿಯಿದೆ. ಆ ಅಂಗಡಿಯಲ್ಲಿ ಕಬ್ಬು ಮಾರುತ್ತಿದ್ದಾರೆ. ಬಹಳ ಸಿಹಿಯಾಗಿದೆ. ನಿನಗೆ ನಾನು ಹಣ ಕೊಡುತ್ತೇನೆ. ಹೋಗಿ ಒಂದು ತುಂಡು ಕಬ್ಬು ತಿಂದುಕೊಂಡು ಬಾ" ಎಂದು ಅಜ್ಜಿ ತನ್ನ ಸಂಚಿಯಿಂದ ಚಿಲ್ಲರೆ ಹಣ ತೆಗೆದು ಕೊಟ್ಟಳು.

ಮೊಮ್ಮಗ ಹಣ ಕೈಗೆ ಸಿಗುವುದೇ ತಡ, ಒಂದೇ ಸಮ ಓಡಿದ ಅಂಗಡಿಯ ಕಡೆಗೆ. ಅಲ್ಲಿಗೆ ಹೋದಾಗ ಮಾಡಿದ್ದೇ ಬೇರೆ. "ಈ ಕಬ್ಬನ್ನು ಜಗಿಯುವ ಕೆಲಸ ಯಾರಿಗೆ ಬೇಕು? ಇದರ ಬದಲು ನನಗೆ ನೆಲಗಡಲೆಯೇ ಆದೀತು" ಎಂದು ಮೊಮ್ಮಗ ನೆಲಗಡಲೆ ಕೊಂಡು ಕೊಂಡು ತಿನ್ನುತ್ತಾ ಮನೆಗೆ ಬಂದ.

"ಅಜ್ಜೀ ಅಜ್ಜೀ, ಕಬ್ಬು ತಿಂದಿಲ್ಲ, ನೆಲಗಡಲೆ ತಿಂದು ಬಂದೆ" ಎಂದು ಮೊಮ್ಮಗ ಅಜ್ಜಿಯ ಎದುರು ನಿಂತು ಹಲ್ಲು ಬಿಟ್ಟ. ಅಜ್ಜಿಗೆ ಮೊಮ್ಮಗನನ್ನು ನೋಡಿ, ಮೊಮ್ಮಗನ ಹಲ್ಲು ನೋಡಿ ಏನು ಹೇಳಬೇಕೆಂದೇ ತಿಳಿಯದಾಯಿತು. ಆದರೆ "ಕಬ್ಬು ತಿಂದುಕೊಂಡು ಬಾ ಎಂದರೆ ಕಡ್ಲೆ ತಿಂದು ಬಂದನಂತೆ" ಎಂಬ ಗಾದೆ ಒಂದು ಹುಟ್ಟಿಕೊಂಡಿತು.

ಅಪಾರ ಜೀವನಾನುಭವದಿಂದ ಪ್ರಾಪ್ತವಾದ ಹಳ್ಳಿಗರ ನಡೆನುಡಿಗಳು ತಮ್ಮ ಸಮಯಪ್ರಜ್ಞೆ ಮತ್ತು ಸಾಂದರ್ಭಿಕ ವಿವೇಕದಿಂದ ನಮಗೆ ಬೆರಗನ್ನು ಉಂಟುಮಾಡುತ್ತವೆ. ಹಾಸ್ಯದ ಹೊನಲನ್ನು ಹರಿಸುತ್ತವೆ. ಜನಪದ ಗಾದೆಗಳು, ನುಡಿಗಟ್ಟುಗಳು, ನಂಬಿಕೆಗಳು, ಆಚರಣೆಗಳು, ಗುರುತುಗಳು ಹೀಗೆ ಬಹುಬಗೆಗಳ ನಿರ್ಮಾಣದ ಹಿಂದೆ ಕಿರುಗತೆಗಳ ಸಿಡಿಪಟಾಕಿಯೊಂದು ಅವಿತುಕೊಂಡಿರುತ್ತದೆ.

ಕವಿ ಜಾನಪದ ವಿದ್ವಾಂಸ ಮತ್ತು ಕತೆಗಾರರಾದ ಡಾ. ವಾಮನ ನಂದಾವರ ಬಾಲ್ಯದಿಂದ ತೊಡಗಿ ತಮ್ಮ ಬದುಕಿನ ಬೇರೆ ಬೇರೆ ಸಂದರ್ಭಗಳಲ್ಲಿ ಕೇಳಿದ ಸಂಗತಿಗಳ ಹಿಂದಿನ ಜಾಡನ್ನು ಹಿಡಿದು ಅಲ್ಲಿನ ವಿವರಣೆಗಳಿಗೆ ಕಥನದ ರೂಪವೊಂದನ್ನು ತೊಡಿಸಿ ಅವನ್ನು ಇಲ್ಲಿ ಮಾಲೆ ಪಟಾಕಿಯಂತೆ ಜೋಡಿಸಿಕೊಟ್ಟಿದ್ದಾರೆ. ಈ ಕಿರುಗತೆಗಳನ್ನು ಮಕ್ಕಳು ಮತ್ತು ದೊಡ್ಡವರು ಎಲ್ಲರೂ ಓದಿ ಸ್ವಚ್ಛಂದವಾಗಿ ನಕ್ಕು, ವಿರಾಮವಾಗಿ ಆ ಕತೆಗಳ ಒಳಗಿನ ಜಾಣ್ಮೆ ಹಾಗೂ ನೀತಿಯನ್ನು ಮನನ ಮಾಡಿಕೊಳ್ಳುವುದು ಇಂದಿನ ಆಧುನಿಕ ಸಾಮಾಜಿಕ ಸಂದರ್ಭಕ್ಕೆ ಹೆಚ್ಚು ಅಗತ್ಯವಾದುದು.

ಪ್ರೊ. ಬಿ.ಎ. ವಿವೇಕ ರೈ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಕುಡ್ಲ
ಬೆಲೆ : ರೂ. 75